ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಜುಲೈ 2023

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ-24 ಸಂಚಿಕೆ-7 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಉಡುಪಿ ಶ್ರೀ ಶಾರದಾ ದೇವಸ್ಥಾನದಲ್ಲಿ 3.7.2023ರಂದು ಗುರುಪೂರ್ಣಿಮೆಯನ್ನು ಆಚರಿಸಲಾಯಿತು





## ಉಡುಪಿ ಶ್ರೀ ಶಾರದಾ ಮಂಟಪದ ಹವಾನಿಯಂತ್ರಿತ ಸಭಾಂಗಣಕ್ಕೆ ದೇಣಿಗೆ ನೀಡಿದವರು

| | | |
|---|---|---|
| 01. | ಶ್ರೀ ಪಿ. ಸತೀಶ್ ರಾವ್, ಚಿಟ್ಪಾಡಿ | 1,00,000 |
| 02. | ಶ್ರೀಮತಿ ಗೀತಾ ಸದಾಶಿವ ರಾವ್, ಬೈಲೂರು, ಉಡುಪಿ | 1,00,000 |
| 03. | ಶ್ರೀ ಮೋಹನ್ ಲಕ್ಷ್ಮೀನಾರಾಯಣ ಶ್ಯಾನಭೋಗ್, ಪೆರಂಪಳ್ಳಿ | 50,001 |
| 04. | ಡಾ। ಅನುಷಾ ಚಂದ್ರಶೇಖರ ರಾವ್, ಮಣಿಪಾಲ | 50,000 |
| 05. | ಡಾ। ಪಿ. ಜಿ ರಾವ್, ಮಾರ್ಪಳ್ಳಿ | 50,000 |
| 06. | ಡಾ। ರಾಜೇಶ್ ರಾವ್, ಮುಂಬಯಿ | 25,000 |
| 07. | ಶ್ರೀ ಎಸ್.ಎಂ. ರಾವ್, ಲಕ್ಷ್ಮೀಂದ್ರನಗರ, ಉಡುಪಿ | 25,000 |
| 08. | ಶ್ರೀ ಬಿ. ರಮೇಶ್, ಅಡ್ಕದಕಟ್ಟೆ | 25,000 |
| 09. | ಡಾ। ರಮೇಶ್ ರಾವ್, ಕುಂಜಾರುಗಿರಿ | 25,000 |
| 10. | ಶ್ರೀ ಶರತ್ ರಾವ್, ಬೆಳ್ಮಣ್ | 25,000 |
| 11. | ಶ್ರೀ ಬಿ. ವಾಸುದೇವ ರಾವ್, ಲಕ್ಷ್ಮೀಂದ್ರನಗರ, ಉಡುಪಿ | 20,000 |
| 12. | ಶ್ರೀ ಬಿ. ಜನಾರ್ಧನ ರಾವ್, ಬೈಲಕೆರೆ, ಉಡುಪಿ | 20,000 |
| 13. | ಶ್ರೀ ಸೌಕೂರು ಜಯರಾಮಯ್ಯ, ಉಡುಪಿ | 15,000 |
| 14. | ಶ್ರೀ ದಿವಾಕರ ರಾವ್, ಸುರತ್ಕಲ್ | 15,000 |
| 15. | ಶ್ರೀ ಶ್ರೀನಿವಾಸ್ ರಾವ್, ಪರ್ಕಳ | 10,000 |
| 16. | ಶ್ರೀ ವ್ಯಾಸ ರಾವ್, ಕೊಕ್ಕರ್ಣೆ | 10,000 |
| 17. | ಶ್ರೀಮತಿ ರೀಟಾ ಪೈ, ಕುರಂಜಿಬೆಟ್ಟು | 10,100 |
| 18. | ಶ್ರೀ ಎಂ. ಪಾಲಚಂದ್ರ ರಾವ್, ಉಡುಪಿ | 10,000 |
| 19. | ಶ್ರೀಮತಿ ಸಂಪತ್ತಿ ಮತ್ತು ಶ್ರೀ ಪಿ. ಗುರುರಾಜ ರಾವ್, ಕೊಡವೂರು | 10,000 |
| 20. | ಶ್ರೀ ಬಿ. ಜಯರಾಮ್ ರಾವ್, ಉಡುಪಿ | 10,000 |
| 21. | ಶ್ರೀ ರಾಮ್ ಮೂರ್ತಿ ರಾವ್, ಪೆರ್ಡೂರು | 10,000 |
| 22. | ಶ್ರೀಮತಿ ಗೀತಾ ಶೋಭಾ ರಾವ್ | 10,000 |
| 23. | ಶ್ರೀ ಪ್ರಕಾಶ್ ರಾವ್, ಕೋಲ್ಲೆ | 5,000 |
| 24. | ಶ್ರೀ ಮಿಲನ್ ರಾವ್, ಬ್ರಹ್ಮಗಿರಿ, ಉಡುಪಿ | 5,000 |
| 25. | ಶ್ರೀ ಕಿಶೋರ್ ಕುಮಾರ್, ಅಲೆವೂರು | 3,000 |
| 26. | ಶ್ರೀ ಕೆ. ಜಯರಾಮ ಶಾಸ್ತ್ರಿ, ಪರ್ಕಳ | 2,001 |

(ಮುಂದುವರಿಯುವುದು....)

ಸಮಾಜ ಬಾಂಧವರಿಂದ ಇನ್ನೂ ಹೆಚ್ಚಿನ ಧನಸಹಾಯವನ್ನು ನಿರೀಕ್ಷಿಸುತ್ತೇವೆ

## ಶ್ರೀ ಶಾರದಾ ಮಂಟಪದ ಹವಾನಿಯಂತ್ರಿತ ಸಭಾಂಗಣಕ್ಕೆ ಬಡ್ಡಿ ರಹಿತ ಸಾಲ ನೀಡಿದವರು

01 ಶ್ರೀ ಕೆ. ಮಂಜುನಾಥ್ ಹೆಬ್ಬಾರ್, ಉಡುಪಿ
02 ಶ್ರೀ ಕೆ. ಗಣೇಶ್ ಹೆಬ್ಬಾರ್, ಅಂಬಲಪಾಡಿ
03 ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
04 ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
05 ಡಾ। ಲೋಕೇಶ್ ರಾವ್, ಉಡುಪಿ
06 ಶ್ರೀ ನಾರಾಯಣ ರಾವ್, ಚಿಟ್ಪಾಡಿ
07 ಡಾ। ಶ್ಯಾಮ ರಾವ್, ಉಡುಪಿ
08 ಡಾ। ವಿಜಯ ವೈ.ಬಿ, ಉಡುಪಿ
09 ಶ್ರೀ ರವೀಂದ್ರ ಹೆಬ್ಬಾರ್, ಬೆಂಗಳೂರು
10 ಶ್ರೀ ರಾಘವೇಂದ್ರ ಹೆಬ್ಬಾರ್, ಕಿನ್ನಿಮುಲ್ಕಿ
11 ಶ್ರೀ ನಿತ್ಯಾನಂದ ಶ್ಯಾನಭೋಗ್, ಅಂಬಲಪಾಡಿ
12 ಶ್ರೀ ಸಂತೋಷ್ ರಾವ್, ಚಿಟ್ಪಾಡಿ
13 ಶ್ರೀ ಯು.ಅರವಿಂದ ಕುಮಾರ್, ಸಂತೋಷ್‌ನಗರ
14 ಶ್ರೀ ದೇವದಾಸ ಶಾಸ್ತ್ರಿ, ಹಿರಿಯಡ್ಕ
15 ಶ್ರೀ ವಸಂತ ರಾವ್, ಹಿರಿಯಡ್ಕ
16 ಶ್ರೀ ವಿಶ್ವನಾಥ್ ರಾವ್, ಹಿರಿಯಡ್ಕ
17 ಶ್ರೀ ಉಮೇಶ್ ರಾವ್, ಮೂಡಬೆಟ್ಟು
18 ಶ್ರೀ ಸತ್ಯವಿಜಯ ರಾವ್, ಉಡುಪಿ
19 ಶ್ರೀ ಮಧುಚಂದ್ರ ಕೊಟ್ಟಾರಿ, ಪೆರ್ಡೂರು
20 ಶ್ರೀ ಟಿ. ಜಗದೀಶ್ ರಾವ್, ಅಡ್ಕದಕಟ್ಟೆ
21 ಶ್ರೀ ಅನೂಪ್ ಮುರಲೀಧರ ರಾವ್, ಇಂದ್ರಾಳಿ

## ಶ್ರೀ ಶೃಂಗೇರಿ ಶಂಕರ ಮಠ, ಉಡುಪಿ ಶಾಖೆ ಇದರ ನಿವೇಶನಕ್ಕೆ ಧನಸಹಾಯ ನೀಡಿದವರು

| | | |
|---|---|---|
| 68. | ಶ್ರೀ ಹರ್ಷಕುಮಾರ್ ಕೇದಿಗೆ, ಮಂಗಳೂರು | 1,00,000/– |
| 69. | ಶ್ರೀ ಕೆ. ಪ್ರಭಾಕರ ರಾವ್, ಮಂಗಳೂರು | 1,50,000/– |
| 70. | ಶ್ರೀಮತಿ ರಜನಿ. ಎ., ಮಂಗಳೂರು | 1,00,000/– |
| 71. | ಶ್ರೀಮತಿ ವಾಗ್ದೇವಿ ಎಸ್.ರಾವ್, ಬೆಂಗಳೂರು | 5,00,000/– |
| 72. | ಶ್ರೀ ಕೆ. ಶ್ರೀನಾಥ ಹೆಬ್ಬಾರ್, ಮಂಗಳೂರು | 40,001/– |
| 73. | ಶ್ರೀಮತಿ ಮಂಜೂಷಾ ಶ್ರೀನಾಥ ಹೆಬ್ಬಾರ್, ಮಂಗಳೂರು | 30,000/– |
| 74. | ಶ್ರೀ ಆದೀಶ ಹೆಬ್ಬಾರ್, ಮಂಗಳೂರು | 30,000/– |
| 85. | ಶ್ರೀ ಎಚ್. ದಿವಾಕರ ಭಟ್, ಪಾವಂಜೆ | 1,00,101/– |
| 96. | ಶ್ರೀಮತಿ ಜಯಲಕ್ಷ್ಮಿ ಎಂ. ರಾವ್, ಉಡುಪಿ | 25,025/– |

(ಮುಂದುವರಿಯುವುದು....)

ಸಮಾಜ ಬಾಂಧವರ ಉದಾರ ಧನಸಹಾಯವನ್ನು ನಿರೀಕ್ಷಿಸುತ್ತೇವೆ.

*'Dharmadhikari, Sri Sringeri Shankara Matha, Udupi Branch' ಈ ಹೆಸರಿನಲ್ಲಿ SB A/c no 0182500101876001, IFSC code - KARB 00 00 018 ಕರ್ನಾಟಕ ಬ್ಯಾಂಕ್, ಅಂಬಾಗಿಲು ಇಲ್ಲಿಗೆ ಸಲ್ಲುವಂತೆ ಚೆಕ್ / ಡಿಡಿ / ನೆಫ್ಟ್ ಇತ್ಯಾದಿಗಳನ್ನು ಕಳಿಸಬೇಕಾಗಿ ಪ್ರಾರ್ಥನೆ.

*80 ಜಿ ನಿಯಮದಂತೆ ತೆರಿಗೆ ವಿನಾಯಿತಿ ಬೇಕಿದ್ದವರು 'Sri Sringeri Sharada Peetham Charitable Trust, Sringeri' ಈ ಹೆಸರಲ್ಲಿ ಚೆಕ್/ಡಿಡಿ ಇತ್ಯಾದಿಗಳನ್ನು ನನಗೆ ಕಳಿಸಬೇಕಾಗಿ ವಿನಂತಿ. PAN ಸಂಖ್ಯೆ ಹಾಗೂ ವಿಳಾಸ ಬೇಕು.

**ವಾಗೀಶ ಎಸ್. ಶಾಸ್ತ್ರೀ,** ಧರ್ಮಾಧಿಕಾರಿ, ಉಡುಪಿ (9449591513)
ವನಸುಮ, ಶ್ರೀದುರ್ಗಾದೇವಸ್ಥಾನದ ಹತ್ತಿರ, ಪುತ್ತೂರು ಉಡುಪಿ 576105

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102.
ಫೋನ್ : 0820–2958444, 8971185844

ಆತ್ಮೀಯ ಸಮಾಜ ಬಾಂಧವರೇ,

ಸಂಘದ ವತಿಯಿಂದ ಅನೇಕ ಕಾರ್ಯಕ್ರಮಗಳು ಜರಗಲಿದ್ದು, ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರೆಲ್ಲರೂ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುತ್ತೇವೆ.

### ನಾಗರಪಂಚಮಿ

ತಾ.21-08-2023ನೇ ಸೋಮವಾರ, ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00ರ ತನಕ

### ವರಮಹಾಲಕ್ಷ್ಮೀ ವ್ರತ

ತಾ.25-08-2023ನೇ ಶುಕ್ರವಾರ
ಸಂಜೆ 5-00ರಿಂದ
(ಫಲಾಹಾರದ ವ್ಯವಸ್ಥೆ ಇದೆ)

### ಹೂವಿನ ಪೂಜೆ

(ಮಹಿಳಾ ವೇದಿಕೆಯ ವತಿಯಿಂದ)
ತಾ.01-09-2023ನೇ ಶುಕ್ರವಾರ
ಸಮಯ : ಸಂಜೆ 5-00 ಗಂಟೆಗೆ

### ಋುಗುಪಾಕರ್ಮ

ತಾ.29-08-2023ನೇ ಮಂಗಳವಾರ, ಬೆಳಿಗ್ಗೆ 10-00ರಿಂದ ಅಪರಾಹ್ನ 12-15ರ ತನಕ
(ಕಾರ್ಯಕ್ರಮದ ನಂತರ ಪ್ರಸಾದ ಭೋಜನ ಇದೆ.)

### ಶೃಂಗೇರಿಯಲ್ಲಿ ಗುರುಗಳ ಭೇಟಿ


ಚಾತುರ್ಮಾಸ ನಿರತರಾಗಿರುವ ಗುರುಗಳ ಭೇಟಿಗೆ ತೆರಳಲು ಸಪ್ಟೆಂಬರ್ ತಿಂಗಳಲ್ಲಿ ಬೆಳಿಗ್ಗೆ 7-30 ಗಂಟೆಗೆ ಶ್ರೀ ಶಾರದಾ ಮಂಟಪದಿಂದ ವಾಹನದ ವ್ಯವಸ್ಥೆ ಮಾಡಲಾಗುತ್ತದೆ. ಅಂದಾಜು ವೆಚ್ಚ ಒಬ್ಬರಿಗೆ ರೂ.450/- ಆಸಕ್ತ ಸಮಾಜ ಬಾಂಧವರು ಮುಂಚಿತವಾಗಿ ಕಾರ್ಯದರ್ಶಿ ಶ್ರೀ ಪಿ.ಪ್ರಭಾಕರ ಭಂಡಿ (9449254846) ಅಥವಾ ಜೊತೆ ಕಾರ್ಯದರ್ಶಿ ಶ್ರೀ ವಿನೋದ್ ಕುಮಾರ್ (9964896319) ಇವರನ್ನು ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ. ದಿನಾಂಕವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

| ಶ್ರೀ ಕೆ. ಮಂಜುನಾಥ ಹೆಬ್ಬಾರ್ | ಶ್ರೀ ಪಿ. ಪ್ರಭಾಕರ ಭಂಡಿ | ಶ್ರೀ ಕೆ. ಗಣೇಶ್ ಹೆಬ್ಬಾರ್ |
|---|---|---|
| ಅಧ್ಯಕ್ಷರು | ಕಾರ್ಯದರ್ಶಿ | ಕೋಶಾಧಿಕಾರಿ |

ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು

# 'ಸಂಭವಾಮಿ ಯುಗೇ ಯುಗೇ'

ವೈ.ಮೋಹನ್ ರಾವ್




ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ, ಶೃಂಗೇರಿ ಇವರ ಆಶೀರ್ವಾದ ಪತ್ರದ ಕೆಲವು ಭಾಗಗಳು ಹೀಗಿವೆ – ನೀವು ರಚನೆ ಮಾಡಿದ 'ಸಂಭವಾಮಿ ಯುಗೇ ಯುಗೇ' ಎಂಬ ಗ್ರಂಥವನ್ನು ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಸಮರ್ಪಿಸಿದ್ದೀರಿ. ಅದನ್ನು ಶ್ರೀ ಶ್ರೀ ಗಳವರು ಅವಲೋಕಿಸಿದ್ದಾರೆ.

ನೀವು ಸನಾತನ ಧರ್ಮೋದ್ಧಾರಕರಾದ ಜಗದ್ಗುರು ಶ್ರೀ ಶಂಕರ ಭಗವತ್ಪಾದಾಚಾರ್ಯರ ಅದ್ಭುತ ಚರಿತ್ರೆ, ಅವರ ಮೇರು ಸದೃಶವಾದ ವ್ಯಕ್ತಿತ್ವ ಹಾಗೂ ಆಚಂದ್ರಾರ್ಕ ನಮ್ಮ ಸನಾತನ ಧರ್ಮದ ಉಳಿವಿಗಾಗಿ ಅವರು ಮಾಡಿದ ಅಸಾಧಾರಣ ಕಾರ್ಯಗಳು ಮುಂತಾದ ಅನೇಕ ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡು, ಅದನ್ನು ಜನರಿಗೆ ತಿಳಿಸಬೇಕೆಂಬ ಸದುದ್ದೇಶದಿಂದ ಈ ಕಿರು ಹೊತ್ತಿಗೆಯನ್ನು ರಚನೆ ಮಾಡಿದ್ದೀರಿ. ಶ್ರೀ ಶ್ರೀ ಗಳವರು ಇದರಿಂದ ತುಂಬಾ ಸಂತೋಷ ಪಟ್ಟಿದ್ದಾರೆ.

ಡಾ। ವೈ. ಸುದರ್ಶನ್ ರಾವ್‌ರವರು ಉಡುಪಿ ಜಿಲ್ಲೆಯ ಹಿರಿಯ ಶಸ್ತ್ರಚಿಕಿತ್ಸಾ ತಜ್ಞರು. ಲೆಪ್ರೋಸ್ಕೋಪಿ ಶಸ್ತ್ರಚಿಕಿತ್ಸೆಯಲ್ಲಿ ವಿಶೇಷ ಫೆಲೋಶಿಪ್ ಪದವಿಯನ್ನು ಅಮಾಸಿ ಸಂಸ್ಥೆಯಿಂದ ಪಡೆದಿರುವರು. ಉಡುಪಿಯಲ್ಲಿ 1998ನೇ ಇಸವಿಯಿಂದ ವಿವಿಧ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್‌ನ ಸಂಚಾಲಕರಾಗಿದ್ದಾರೆ. ಭಾರತೀಯ ವೈದ್ಯಕೀಯ ಸಂಘದ ಉಡುಪಿ ಶಾಖೆಯ ಕೋಶಾಧಿಕಾರಿಯಾಗಿಯೂ, ಅಧ್ಯಕ್ಷರಾಗಿಯೂ, ಉಡುಪಿ ಜಿಲ್ಲಾ ಸಂಯೋಜಕರಾಗಿಯೂ, ಕರ್ನಾಟಕ ರಾಜ್ಯಶಾಖೆಯ ಸಹಕಾರ್ಯದರ್ಶಿಯಾಗಿಯೂ, ಕರ್ನಾಟಕ ರಾಜ್ಯಶಾಖೆಯ 2022ರ ಸಾಲಿನ ವಾರ್ಷಿಕ ಸಮ್ಮೇಳನದ ಸಂಘಟನಾ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ರೋಟರಿ ಸಂಸ್ಥೆಯಲ್ಲಿ ಸಕ್ರಿಯ ಸದಸ್ಯರಾಗಿದ್ದಾರೆ. ಉಡುಪಿಯ ಶ್ರೀ ಶಾರದಾ ಮಂಟಪದಿಂದ ಪ್ರಕಟವಾಗುವ ಶ್ರೀ ಶಾರದಾ ಮಾಸಪತ್ರಿಕೆಗೆ ಸಂಪಾದಕರಾಗಿ ಆರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಇವರು ಶಾರದಾ ಮಂಟಪದ ಆಡಳಿತ ಮಂಡಳಿಯಲ್ಲಿ ಖಜಾಂಚಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

ತೋಟಗಾರಿಕೆ ಹಾಗೂ ಬರವಣಿಗೆ ಇವರ ಹವ್ಯಾಸ. 'ನಾಯಿ ಕಚ್ಚಿತೇ', 'ಇದಂ ಶರೀರಂ', 'ಲೆಪ್ರೋಸ್ಕೋಪಿಕ್ ಸರ್ಜರಿ', 'ಮಕ್ಕಳನ್ನು ಅವಘಡಗಳಿಂದ ರಕ್ಷಿಸಿ', 'MEDI–ಹಾಸ್ಯ'ವೆಂಬ ಹಾಸ್ಯಬರಹಗಳ ಸಂಕಲನವನ್ನೂ, 'ಅಸ್ಮಿತೆ' ಎಂಬ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಪುರಾತನ ದೇವಾಲಯಗಳ ಪರಿಚಯ ಪುಸ್ತಕವನ್ನೂ ಬರೆದು ಪ್ರಕಟಿಸಿದ್ದಾರೆ. ಇವರು ಬರೆದ ಪ್ರಥಮ ಕಥೆ 'ತುಮುಲ' ತರಂಗ ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು. 'ಗುಲಾಬ್ ಜಾಮೂನ್' ಎಂಬ ಇನ್ನೊಂದು ಕಥೆಗೆ ಎಂ. ವ್ಯಾಸ ಸ್ಮರಣಾರ್ಥ ಪ್ರಶಸ್ತಿ ಲಭಿಸಿತ್ತು. 'ಶೀನನ ಕಥೆ', 'ಸಿರಿಂಜ್ ಹಿಡಿವ ಕೈ ಪೆನ್ನು ಹಿಡಿದಾಗ' ಎಂಬ ಕಥಾ ಸಂಕಲನದಲ್ಲಿ ಪ್ರಕಟವಾಗಿದೆ. ಸೋಲಾರ್ ವಿದ್ಯುಚ್ಛಕ್ತಿ, ಮಳೆನೀರಿನ ಕೊಯಿಲು, ಮಳೆನೀರು ಸಂಗ್ರಹ, ಹನಿ ನೀರಾವರಿ ಇತ್ಯಾದಿ ಪರಿಸರಪ್ರೇಮಿ ಚಟುವಟಿಕೆಗಳನ್ನು ತನ್ನ ನಿವಾಸದಲ್ಲಿ ಅಳವಡಿಸಿಕೊಂಡಿದ್ದಾರೆ. ಪ್ರಸ್ತುತ ಉಡುಪಿಯಲ್ಲಿ 'ಇಂಚರ ಸರ್ಜಿಕಲ್ ಕ್ಲಿನಿಕ್' ಎಂಬ ಸುಸಜ್ಜಿತ ಸರ್ಜಿಕಲ್ ಕ್ಲಿನಿಕ್ ಸ್ಥಾಪಿಸಿ ಅದರಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಡಾ। ವೈ. ಸುದರ್ಶನ್ ರಾವ್ ಅವರ ಇತ್ತೀಚೆಗೆ ಬಿಡುಗಡೆಯಾದ ಪುಸ್ತಕ 'ಸಂಭವಾಮಿ ಯುಗೇ ಯುಗೇ'. ಈ ಪುಸ್ತಕದ 'ಮುನ್ನುಡಿ'ಯಲ್ಲಿ ಲೇಖಕರು ತಿಳಿಸಿದ ಹಾಗೆ – ಮೂಲತಃ ಈ ಪುಸ್ತಕದಲ್ಲಿ ಬರೆದಿರುವುದು ಶ್ರೀ ಆದಿಶಂಕರಾಚಾರ್ಯರ ಜೀವನ ಚರಿತ್ರೆ. ಶ್ರೀ ಶಂಕರಾಚಾರ್ಯ ಎನ್ನುವ ಹೆಸರು ಭಾರತದ ಮೂಲೆಮೂಲೆಗಳಲ್ಲೂ ಧ್ವನಿಸುವ ಪರಿಚಿತವಾದ ಹೆಸರು. ಕ್ರಿ.ಶ. ಎಂಟನೆಯ ಶತಮಾನದಲ್ಲಿ ಕೇವಲ ಮೂವತ್ತೆರಡು ವರ್ಷಗಳ ಕಾಲ ಜೀವಿಸಿದ್ದ ಈ ಸನ್ಯಾಸಿಯ ನೆನಪು ಇಷ್ಟು ವರ್ಷಗಳ ನಂತರವೂ ಜನರ ಮನದಿಂದ ಅಳಿಯದೇ ಇರುವುದೊಂದು ದೊಡ್ಡ ಪವಾಡ. ಸೋಜಿಗವೆಂದರೆ ಇತಿಹಾಸವನ್ನು ಅಗೆದು ನೋಡಿದರೂ ಶ್ರೀ ಶಂಕರರ ಬಗ್ಗೆ ಒಂದು ಶಿಲಾಶಾಸನವಾಗಲೀ ತಾಮ್ರಪತ್ರವಾಗಲೀ ಸಿಗದು. ಆ ಕಾಲದಲ್ಲಿ ನೂರಾರು ರಾಜರಿದ್ದರೂ ಅವರ ಆಸ್ಥಾನದಲ್ಲಿ ಶ್ರೀ ಶಂಕರರ ಉಲ್ಲೇಖ ಸಿಗದು. ಏನಿದ್ದರೂ ಶ್ರೀ ಶಂಕರರು ರಚಿಸಿದ ಕೃತಿಗಳೇ, ಅವರು ಕಟ್ಟಿದ ದೇವಾಲಯಗಳೇ, ಅವರು ಸ್ಥಾಪಿಸಿದ ಮಠಗಳೇ, ಅವರು ಮಾಡಿದ ಕೆಲಸಗಳೇ ಅವರು ಇದ್ದರು ಎಂಬುವುದನ್ನು ನಿರೂಪಿಸಲು ಇರುವ ಆಧಾರಗಳು. ಸ್ವಯಂ ಪ್ರಕಾಶಿಸುವುದು ಎನ್ನುವ ಶಬ್ದಕ್ಕೆ ಇದೇ ಅತ್ಯುತ್ತಮ ಉದಾಹರಣೆ. ಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆಯನ್ನು ಬಾಲ್ಯದಲ್ಲಿಯೇ ಓದಿದ್ದೆ. ಅವರ ಜೀವನ ಚರಿತ್ರೆಯಲ್ಲಿ ನನಗೆ ಅತ್ಯಂತ ಇಷ್ಟವಾದ ಘಟನೆಗಳೆಂದರೆ ಅವರು ಚಾಂಡಾಲನನ್ನು ವಾರಣಾಸಿಯ ಬೀದಿಯಲ್ಲಿ ಭೇಟಿಯಾದ ಘಟನೆ ಹಾಗೂ ತನ್ನ ತಾಯಿ ಆರ್ಯಾಂಬೆಯ ಅಂತ್ಯ ಸಂಸ್ಕಾರ ಮಾಡಿದ ಘಟನೆಗಳು. ಅಂತರ್ಜಾಲದಲ್ಲಿ ತಡಕಾಡಿದರೆ ಶ್ರೀ ಶಂಕರಾಚಾರ್ಯರು ಅದ್ವೈತ ಮತ ಸ್ಥಾಪಕರು, ಬೌದ್ಧಮತದ ಪ್ರಭಾವದಿಂದ ಹಿಂದೂ ಧರ್ಮವನ್ನು ಉಳಿಸಿದವರು ಎಂಬ ವಿವರಗಳು ಯಥೇಚ್ಛವಾಗಿ ಸಿಗುತ್ತವೆ.

(ಮುಂದುವರಿಯುವುದು)

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.

★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ


# ಹವ್ಯಾಸವೊಂದು ಜೀವನ ಶೈಲಿಯಾದಾಗ....

–ಡಾ. ಜಯಭಾರತಿ.ಎ

W/o Late Prasanna Rao Aluggel, Hiriadka

ಹುಟ್ಟಿನಿಂದ ಸಾಯುವವರೆಗೆ ಜೀವನ ನಿರಂತರ. ಕೆಲವರಿಗೆ ತಾವು ಅಂದುಕೊಂಡಂತೆ ಜೀವನ ಸಾಗಿ ಬಂದರೆ ಇನ್ನು ಕೆಲವರಿಗೆ ಜೀವನದಲ್ಲಿ ಬಂದೊದಗುವ ಸನ್ನಿವೇಶಗಳಿಗೆ ತಮ್ಮನ್ನು ತಾವು ಬದಲಾಯಿಸಿಕೊಂಡು ಹೊಂದಾಣಿಕೆ ಮಾಡಿಕೊಂಡು ಹೋಗುವ ರೀತಿಯೇ ಜೀವನ. ಆದರೆ ಹೆಚ್ಚಿನವರ ಪಾಲಿಗೆ ಅದರಲ್ಲೂ ಹೆಣ್ಣಿಗೆ ಬಂದೊದಗುವುದು





ಎರಡನೇ ರೀತಿಯಾದ ಜೀವನ, ಪರಿಸ್ಥಿತಿಯೊಂದಿಗೆ ಹೊಂದಾಣಿಕೆ. ಈ ಎರಡನೇ ವರ್ಗಕ್ಕೆ ಸೇರಿದವಳಾದ ನನ್ನನ್ನು ನನ್ನ ಅರಿವಿಗೆ ಬಾರದಂತೆ ಸೆಳೆದು ಅಪ್ಪಿಕೊಂಡದ್ದು ಗುಡ್ಡಗಾಡು ಚಾರಣದ ಚಟ ಹಾಗೂ ಇದಕ್ಕೆ ಕಾರಣವಾದದ್ದು ನನ್ನ ಸಹೋದ್ಯೋಗಿಯೊಬ್ಬರಿಂದ ಅಕ್ಟೋಬರ್ 2021ರಲ್ಲಿ ಪರಿಚಯವಾದ Youth Hostel Association of India(YHAI) ಎಂಬ ಸಂಸ್ಥೆ ಹಾಗೂ ನಾನು ಇವರೊಂದಿಗೆ ಹೋದ ಮೊದಲ ಚಾರಣ ಕೊಡಚಾದ್ರಿ ಬೆಟ್ಟಕ್ಕೆ 31.10.2021ರಂದು. ಇಲ್ಲಿಯವರೆಗೂ ತಿಂಗಳಿಗೊಂದರಂತೆ ಚಾರಣವನ್ನು YHAI ಯ ಉಡುಪಿ ಯುನಿಟ್ ಜತೆಗೆ ಮಾಡುತ್ತಾ ಬಂದಿದ್ದೇನೆ ಹಾಗೂ ಇದರಿಂದ ನನ್ನಲ್ಲಿ ತುಂಬುತ್ತಿರುವ ಆತ್ಮವಿಶ್ವಾಸವೇ ಮುಂದಿನ ಜೀವನಕ್ಕೆ ನಿಜವಾದ ಸ್ಫೂರ್ತಿ.

**ಚಾರಣ ಹಾಗೂ ದೈಹಿಕಕ್ಷಮತೆ :**

ಸಾಮಾನ್ಯವಾಗಿ ಒಂದು ದಿನದ ಚಾರಣಗಳು ಆರೋಗ್ಯವಂತವರಾದ ಅಬಾಲ ವೃದ್ಧರಿಗೂ ಸಾಧ್ಯ. ಆದರೆ ಒಂದು ದಿನಕ್ಕಿಂತ ಹೆಚ್ಚಿನ ದಿನಗಳ ಚಾರಣದಲ್ಲಿ ಪಾಲ್ಗೊಳ್ಳಬೇಕಾದರೆ ನಮಗೆ ಬೇಕಾಗಿರುವುದು ನಮ್ಮ Physical Fitness ಬಗ್ಗೆ ಆತ್ಮ ವಿಶ್ವಾಸ. ಇದಕ್ಕಾಗಿ ನಾನು ಅಗತ್ಯವಿರುವ ಪೂರಕ ವ್ಯಾಯಾಮಗಳನ್ನು ಜಿಮ್‌ನಲ್ಲಿ ಪ್ರತಿನಿತ್ಯ ಬೆಳಿಗ್ಗೆ ಮಾಡುತ್ತಿದ್ದೇನೆ.

ಹವ್ಯಾಸಗಳು ಎರಡುತರನಾದವು, ಕೆಟ್ಟದ್ದಾಗಿದ್ದರೆ ಕೆಟ್ಟ ಹವ್ಯಾಸ ಅಥವಾ ವ್ಯಸನ ಅಥವಾ ದುಶ್ಚಟ. ಇನ್ನೊಂದು ಇದಕ್ಕಿಂತ ಭಿನ್ನವಾದದ್ದು ಅದುವೇ ನಮ್ಮನ್ನು ಧನಾತ್ಮಕವಾಗಿ ಮಾರ್ಪಡಿಸುವ ಒಳ್ಳೆಯ ಚಟಗಳು ಅಥವಾ ಹವ್ಯಾಸ. ಮನುಷ್ಯನಿಗೆ ವ್ಯಸನಗಳಿಗೆ ಹಾಗೂ ಹವ್ಯಾಸಗಳಿಗೆ ದಾಸನಾಗಲು ಹೆಚ್ಚು ಸಮಯ ಏನೂ ಬೇಕಾಗುವುದಿಲ್ಲ. ಅಂತೆಯೇ ನನಗೂ ಸಹ ಚಾರಣದ ಹವ್ಯಾಸ ಹಾಗೂ ಅದಕ್ಕೆ ಬೇಕಾದ

(3ನೇ ಪುಟಕ್ಕೆ...)

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸ್ಶೆಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 10.00% (ಷರತ್ತುಗಳು ಅನ್ವಯ)

| | |
|---|---|
| ಗೃಹ ಸಾಲ | : 10.5% |
| ವಾಹನ ಸಾಲ | : 12.5% |
| ಹಳೆಯ ವಾಹನ | : 15% |
| ಆಭರಣ ಸಾಲ | : 12% |
| ವೈಯಕ್ತಿಕ ಸಾಲ | : 16% |
| ಶಿಕ್ಷಣ ಸಾಲ | : 12% |
| ಅಡಮಾನ ಸಾಲ | : 12% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷದಿಂದ 3 ವರ್ಷದ ತನಕ | : 8.5% |
| 3 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% | | |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2016-17ರಿಂದ 2021-22ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**

1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

## ಹವ್ಯಾಸವೊಂದು ಜೀವನ ಶೈಲಿಯಾದಾಗ....

■...2ನೇ ಪುಟದಿಂದ

ದೈಹಿಕಕ್ಷಮತೆಯನ್ನು ಹೆಚ್ಚಿಸುವಗೀಳು ಅಂಟಿಕೊಂಡು ಬಿಟ್ಟಿತು.

**Youth Hostel Association of India(YHAI) ಒಂದು ಕಿರು ಪರಿಚಯ**

Youth Hostel Association of India(YHAI)ವು International Youth Hostel Federation (Germany)ಯ ಅಂಗ ಸಂಸ್ಥೆಯಾಗಿ ಅಸ್ತಿತ್ವಕ್ಕೆ ಬಂತು ಅಂತೆಯೇ ಉಡುಪಿಯಲ್ಲಿ ಇರುವ ಇದರ ಅಂಗ ಸಂಸ್ಥೆ ಅತ್ಯಂತ ಕ್ರಿಯಾಶೀಲವಾಗಿದೆ. ನಾವು ಕೇವಲ ವರ್ಷಕ್ಕೆ ರೂ. 200 ಪಾವತಿಸಿ ಇದರ ವಾರ್ಷಿಕ ಸದಸ್ಯತ್ವವನ್ನು ಪಡೆದುಕೊಳ್ಳಬಹುದು ಅಥವಾ ರೂ. 3000 ಅನ್ನು ಪಾವತಿಸಿ ಅಜೀವಸದಸ್ಯತ್ವವನ್ನು ಸಹಪಡೆದುಕೊಳ್ಳಬಹುದು. ಉಡುಪಿ ಯೂನಿಟ್‌ನಿಂದ ಸಾಮಾನ್ಯವಾಗಿ ಪ್ರತೀ ತಿಂಗಳು ಒಂದು ದಿನದ ಚಾರಣ ಹಾಗೂ ಕೆಲವೊಮ್ಮೆ ಎರಡು ದಿನದ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳುತ್ತಾರೆ. ನಮ್ಮ ಸಮಯಾವಕಾಶ ಹಾಗೂ ಅನುಕೂಲತೆಗಳನ್ನು ನೋಡಿಕೊಂಡು ನಾವು ಇಂತಹ ಚಾರಣದಲ್ಲಿ ಪಾಲ್ಗೊಳ್ಳಬಹುದಾಗಿದೆ. ಸಾಮಾನ್ಯವಾಗಿ ಬೆಳಿಗ್ಗೆ 5.30 ರಿಂದ 6.00 ಗಂಟೆಗೆ ಉಡುಪಿಯಿಂದ ಹೊರಡುವ ಈ ತಂಡವು ತಮ್ಮ ಚಾರಣ ಅಥವಾ ಪ್ರವಾಸವನ್ನು ಮುಗಿಸಿ ಸಂಜೆಗೆ ಮರಳಿಬರುತ್ತದೆ. ಪ್ರತಿಯೊಬ್ಬರು ತಮಗೆ ಬೇಕಾದ ಆಹಾರ, ತಿಂಡಿ, ನೀರು ಎಲ್ಲವನ್ನು ಸ್ವತಃ ತಾವೇ ಕೊಂಡೊಯ್ಯುತ್ತೇವೆ ಹಾಗೂ ವಾಹನದ ಖರ್ಚನ್ನು ಪ್ರತಿಯೊಬ್ಬರಿಗೂ ಸಮಾನವಾಗಿ ಹಂಚಲಾಗುತ್ತದೆ. ನಮ್ಮ ಉಡುಪಿ ತಂಡದಲ್ಲಿ ಸುಮಾರು ಏಳು ವರ್ಷಗಳಿಂದ ಎಪ್ಪತ್ತು ವರ್ಷಕ್ಕೂ ಮೇಲ್ಪಟ್ಟ ವಯಸ್ಸಿನ ಸದಸ್ಯರುಗಳಿದ್ದಾರೆ ಹಾಗೂ ತಾವುಗಳು ಪಾಲ್ಗೊಂಡ ಚಾರಣವನ್ನು ಯಶಸ್ವಿಯಾಗಿ ಪೂರೈಸುತ್ತಾರೆ. ಚಾರಣದುದ್ದಕ್ಕೂ ತಂಡದ ಸದಸ್ಯರೆಲ್ಲರೂ ಜೊತೆಯಲ್ಲಿ ಸಾಗುವಂತೆ ಎಚ್ಚರ ವಹಿಸಲಾಗುತ್ತದೆ ಹಾಗೂ ಕೊನೆಯಲ್ಲಿ ಮಾತ್ರ ಅನುಭವಿ ಚಾರಣಿಗರ ತಂಡದ ಎಲ್ಲರ ಸುರಕ್ಷತೆಯನ್ನು ಗಮನಿಸಿಕೊಂಡು ಸಾಗಿಬರುತ್ತದೆ. ಚಾರಣದುದ್ದಕ್ಕೂ ಪ್ರಕೃತಿ ಪ್ರಿಯರು ಛಾಯಾಚಿತ್ರವನ್ನು ತೆಗೆಯುತ್ತಾ ಪ್ರಕೃತಿಯನ್ನು ಸೇವಿಸುತ್ತಾ ಸಾಗಿ ಬರುತ್ತಾರೆ. ದೂರದ ಚಾರಣವನ್ನು ಏರ್ಪಡಿಸಿದ್ದಲ್ಲಿ ಒಂದು ರಾತ್ರಿಯನ್ನು ಯಾವುದಾದರೂ ಹೋಂ ಸ್ಟೇ ಅಥವಾ ರೆಸೋರ್ಟ್‌ನಲ್ಲಿ ಕಳೆಯುವುದು ಇದೆ. ನಮ್ಮ ಉಡುಪಿ ಯುನಿಟ್‌ನಂತೆ ಎಲ್ಲಾ ಜಿಲ್ಲೆಗಳಲ್ಲೂ ಪ್ರತ್ಯೇಕ ಯೂನಿಟ್‌ಗಳು ಕಾರ್ಯನಿರ್ವಹಿಸುತ್ತವೆ.

YHAI ವತಿಯಿಂದ ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ಚಾರಣಗಳನ್ನು ಸಹ ಆಯೋಜಿಸಲಾಗುತ್ತದೆ. ಇದೊಂದು ಲಾಭದಾಯಕವಲ್ಲದ ಸಂಸ್ಥೆ ಆಗಿರುವುದರಿಂದ ಇದರ ಎಲ್ಲಾ ಚಾರಣಗಳು ಸಹ ಅತ್ಯಂತ ಕಡಿಮೆ ಬಜೆಟ್‌ನಲ್ಲಿ ಆಗುತ್ತವೆ ಮತ್ತು ವ್ಯವಸ್ಥೆಗೆ ಹಾಗೂ ಸುರಕ್ಷತೆಗೆ ಆದ್ಯತೆಯನ್ನು ನೀಡಲಾಗುತ್ತದೆ. ನಮ್ಮ ಉಡುಪಿ ಯೂನಿಟ್‌ನಲ್ಲಿ ಈಗಾಗಲೇ ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ಹಲವಾರು ಚಾರಣಗಳನ್ನು ಪೂರೈಸಿ ಬಂದಂತಹ ಹಿರಿಯ ಚಾರಣಿಗರಿದ್ದಾರೆ.

ನಾನು ಈಗಾಗಲೇ ಉಡುಪಿ ಯುನಿಟ್‌ನೊಂದಿಗೆ 8–10 ಚಾರಣಗಳನ್ನು ಮುಗಿಸಿದ್ದು ಎಲ್ಲವೂ ಸಹ ಅತ್ಯಂತ ಅವಿಸ್ಮರಣೀಯವಾದದು. ಕಾಲೇಜಿನಲ್ಲಿ ದೈಹಿಕಶಿಕ್ಷಣ ನಿರ್ದೇಶಕಿ ಆಗಿರುವ ನನಗೆ ಯಾವಾಗಲೂ ಜವಾಬ್ದಾರಿಯುತ ಕ್ಷಣಗಳನ್ನು ವಿದ್ಯಾರ್ಥಿಗಳೊಂದಿಗೆ ಕಳೆಯಬೇಕಾದ ಅನಿವಾರ್ಯತೆ ಹಾಗೂ ಸಂಸಾರದ ಜವಾಬ್ದಾರಿ ಸಹ ನನ್ನಮೇಲೆ. ಆದರೆ YHAI ಜತೆಗೆ ಚಾರಣಗಳು ಹೋಗುವ ಸಂದರ್ಭದಲ್ಲಿ ಯಾವುದೇ ಜವಾಬ್ದಾರಿ ಹಾಗೂ ಒತ್ತಡವಿಲ್ಲದೆ ಪ್ರಕೃತಿಯೊಂದಿಗೆ ಕಾಲಕಳೆಯುವ ಕ್ಷಣಗಳು ನನ್ನದಾಗುತ್ತವೆ ಹಾಗೂ ನಾನು ಪೂರ್ತಿಯಾಗಿ ನನಗಾಗಿಯೇ ಕಳೆಯುವ ಕ್ಷಣಗಳು ಇದಾಗಿರುತ್ತವೆ. ಹೀಗಿದ್ದಾಗ ಇತ್ತೀಚಿಗೆ ನನಗೆ ಪರಿಚಯವಾದದ್ದು ಉಡುಪಿಯ ಟೆಂಪಲ್ವಾಕ್ ತಂಡ. ಇವರು ಪ್ರತಿ ತಿಂಗಳ ಮೊದಲನೇ ಭಾನುವಾರದಂದು ಉಡುಪಿಯ ಸುತ್ತಮುತ್ತ ಸುಮಾರು 20ಕಿ.ಮೀ. ಒಳಗೆ ಇರುವ ಯಾವುದಾದರೂ ಒಂದು ದೇವಸ್ಥಾನಕ್ಕೆ ಉಡುಪಿಯ ರಥಬೀದಿಯಿಂದ ಬೆಳಿಗ್ಗೆ 4:30ಕ್ಕೆ ಪಾದಯಾತ್ರೆಯಲ್ಲಿ ಸಾಗುತ್ತಾರೆ.

ಜೂನ್ ತಿಂಗಳಿನಲ್ಲಿ ಶ್ರೀಕೃಷ್ಣಮಠದಿಂದ ಕುಂಜಾರುಗಿರಿಗೆ ಹೊರಟಾಗ ಇವರ ಜತೆಗೆ ಸೇರಿಕೊಂಡವಳು ನಾನು. ಅಂತೆಯೇ ಗುಂಪಿನಲ್ಲಿ ಮುಂಜಾನೆ ದಾರಿ ಸವೆಸುವ ಸವಿಯನ್ನು ಸಂಪೂರ್ಣವಾಗಿ ಆಸ್ವಾದಿಸಿದವಳು, ಜೀವನದಲ್ಲಿ ಬಂದೊದಗುವ ಅನಿವಾರ್ಯ ಸಂಕಟ, ಸಂಸಾರ ಭಾರ, ಉದ್ಯೋಗದ ಒತ್ತಡ ಇವೆಲ್ಲದುದರಿಂದ ನನಗೆ ಸ್ವಲ್ಪ ಭಿನ್ನವಾಗಿ ಯೋಚನೆ ಮಾಡಿ ಕೆಲವು ಕ್ಷಣಗಳನ್ನು ನಾನು ನನ್ನ ಸ್ವಂತಕ್ಕಾಗಿ ಕಳೆಯಲು ಅವಕಾಶಗಳನ್ನು ಒದಗಿಸಿಕೊಟ್ಟ ಈ ಚಟುವಟಿಕೆಗಳಿಗೆ ನಾನೆಂದಿಗೂ ಚಿರಋಣಿ. ಅಂತೆಯೇ ನನ್ನ ಚಾರಣದ ಮುಂದುವರಿದ ಭಾಗವಾಗಿ ನಾನು ಜುಲೈ 27 ರಿಂದ ಆಗಸ್ಟ್ 4ರವರೆಗೆ ಉತ್ತರಖಂಡದ ವ್ಯಾಲಿ ಆಫ್ಲವರ್ಸ್ ಚಾರಣವನ್ನು YHAI ರಾಷ್ಟ್ರೀಯ ಕಾರ್ಯಕ್ರಮದ ಅಡಿಯಲ್ಲಿ ಕೈಗೊಳ್ಳಲಿದ್ದೇನೆ. ನಮ್ಮ ಉಡುಪಿ ಘಟಕದ ಮೂರು ಸದಸ್ಯರು ಈ ಚಾರಣದಲ್ಲಿ ಪಾಲ್ಗೊಳ್ಳುತ್ತಾರೆ. ನಾನು ಈಗಾಗಲೇ ರಾಜ್ಯಮಟ್ಟದ ಮೂರುದಿನಗಳ ಕುದುರೆಮುಖದ ಚಾರಣವನ್ನು ಮಂಗಳೂರು ಯುನಿಟಿನ ಸ್ಟೇಟ್ ಲೆವೆಲ್ ಟ್ರೆಕ್ಕಿಂಗ್‌ನಲ್ಲಿ ಪೂರೈಸಿರುತ್ತೇನೆ. ಮನುಷ್ಯ ತಾನು ಹುಚ್ಚನಾಗುವ ಮೊದಲು ತಾನೇ ಒಂದು ಹುಚ್ಚನ್ನು ಅಂಟಿಸಿಕೊಂಡು ಬಿಡಬೇಕು, ನನ್ನಂತೆ.


ಕೊನೆಯದಾಗಿ ನನ್ನ ಈ ಹವ್ಯಾಸವನ್ನು ಗಮನಿಸಿ ಬರಹಗಾರ್ತಿಯಲ್ಲದ ನನ್ನನ್ನು ಈ ಲೇಖನ ಬರೆಯುವಂತೆ ಪ್ರೋತ್ಸಾಹಿಸಿದ ಶ್ರೀ ಪ್ರಭಾಕರ ಭಂಡಿ ಇವರಿಗೆ ನಾನು ಚಿರಋಣಿ. . . . . . . . . . . .

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಬಂಟ್ವಾಳ ವಲಯ–ವಿಟ್ಲ : ಮಹಾಸಭೆ



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಬಂಟ್ವಾಳ ವಲಯ – ವಿಟ್ಲ ಇದರ 19ನೇ ವರ್ಷದ ಮಹಾಸಭೆಯು ಸಭಾಧ್ಯಕ್ಷರಾದ ಶ್ರೀ ಅನಾರು ಕೃಷ್ಣಶರ್ಮರ ಅಧ್ಯಕ್ಷತೆಯಲ್ಲಿ ತಾ.25.06.2023ನೇ ಭಾನುವಾರ ಬಿ.ಸಿ. ರೋಡಿನ ಕನ್ನಡ ಭವನದಲ್ಲಿ ನೆರವೇರಿತು. ಸುಮಂಗಲಿಯರಿಂದ ದೀಪ ಪ್ರಜ್ವಲನೆ ನಡೆಸಿ ಬಳಿಕ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ಪಠಿಸಲಾಯಿತು. ಕುಮಾರಿ ವಿದ್ಯಾಲಕ್ಷ್ಮಿಯ ಪ್ರಾರ್ಥನೆಯೊಂದಿಗೆ ಮಹಾಸಭೆ ಪ್ರಾರಂಭವಾಯಿತು. ಶ್ರೀ ಸಂತೋಷ ರಾವ್ ಕಾವಳಕಟ್ಟೆಯವರು ವೇದಿಕೆಗೆ ಸಭಾ ಮತ್ತು ಪ್ರತಿಷ್ಠಾನದ ಪದಾಧಿಕಾರಿಗಳನ್ನು ಆಹ್ವಾನಿಸಿದರು. ಶ್ರೀ ಹರೀಶ್ ಕುಮಾರ್ ವಿ. ಎಲ್ಲರಿಗೂ ಸ್ವಾಗತ ಕೋರಿದರು. ಶ್ರೀ ನಿತಿನ್ ಕುಮಾರ್ ಪ್ರಸ್ತಾವನೆ ನೆರವೇರಿಸಿದ ಬಳಿಕ ವರದಿ ವರ್ಷದಲ್ಲಿ ಮೃತರಾದ ತಾಲೂಕಿನ ಸಮಾಜ ಬಾಂಧವರಿಗೆ ಸಂತಾಪ ಸೂಚಿಸಲಾಯಿತು. ಕಾರ್ಯದರ್ಶಿಯವರಾದ ಶ್ರೀ ಶ್ರೀಧರರಾವ್ ನೆಟ್ಲರವರು ಮಹಾಸಭೆಯ ತಿಳುವಳಿಕೆ ಪತ್ರವನ್ನು ಓದಿ ವಾರ್ಷಿಕ ವರದಿಯನ್ನು ಮಂಡಿಸಿದರು. ಸಭೆಯ ಲೆಕ್ಕಪತ್ರವನ್ನು ಕೋಶಾಧಿಕಾರಿ ಶ್ರೀ ರಮೇಶ ರಾವ್ ವಗ್ಗ ಮಂಡಿಸಿದರು. ಶ್ರೀ ಪದ್ಮನಾಭರಾಯರು ವಿದ್ಯಾನಿಧಿಗೆ 25,000 ರೂಗಳ ಚೆಕ್ಕನ್ನು ಹಸ್ತಾಂತರಿಸಿ, ವಿದ್ಯಾರ್ಥಿ ವೇತನ ಪಡೆದ ಎಲ್ಲಾ ಮಕ್ಕಳಿಗೂ ಹಾಗೂ ಸಭಾ ಮಾಡುತ್ತಿರುವ ಉತ್ತಮ ಕೆಲಸಗಳಿಗೆ ಪ್ರೋತ್ಸಾಹದಾಯಕ ಮಾತುಗಳಿಂದ ಹುರಿದುಂಬಿಸಿದರು. ಶಿಕ್ಷಣ ಸಮಿತಿಯ ವತಿಯಿಂದ ಶ್ರೀಮತಿ ಶಾರದಾ ಸುಕುಮಾರ ರಾವ್ ಹಾಗೂ ಶ್ರೀಮತಿ ಅರುಣಾ ಶಿವರಾಮರಾವ್‌ರವರು ವಿದ್ಯಾರ್ಥಿ ವೇತನದ ಕಾರ್ಯಕ್ರಮ ನೆರವೇರಿಸಿದರು. 2021–22ನೇ ಸಾಲಿನಲ್ಲಿ ರಾಜ್ಯಮಟ್ಟದಲ್ಲಿ ಅತ್ಯಧಿಕ ಅಂಕ (620/625) ಪಡೆದ ಅಭಿರಾಮ್‌ರವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

ಪ್ರತಿಷ್ಠಾನದ ಲೆಕ್ಕಪತ್ರವನ್ನು ಕಾರ್ಯದರ್ಶಿ ಶ್ರೀ ವಿಷ್ಣುಶರ್ಮ ಕೇಪು ಮಂಡಿಸಿದರು. ಆಡಿಟ್ ವರದಿಯನ್ನು ಕೋಶಾಧಿಕಾರಿಯವರಾದ ಶ್ರೀ ಹರೀಶ್ ಕುಮಾರ್ ವಿಟ್ಲ ಓದಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಭವಾನಿಶಂಕರ ರಾಯರು ಪ್ರತಿಷ್ಠಾನದ ಕಾರ್ಯ ಪ್ರಗತಿಯ ಸಮಗ್ರ ವರದಿಯನ್ನು ಸಭೆಗೆ ವಿವರಿಸಿದರು. ಅಧ್ಯಕ್ಷೀಯ ಭಾಷಣದ ಮೂಲಕ ಸಭಾದ ಕಾರ್ಯ ಚಟುವಟಿಕೆಗಳು ಹಾಗೂ ಮುಂದೆ ಕೈಗೊಳ್ಳಬೇಕಾದ ಕೆಲಸ ಕಾರ್ಯಗಳು ಅಲ್ಲದೇ ತುರ್ತಾಗಿ ಗುರುಮಂದಿರ ನಿರ್ಮಾಣ ಕಾರ್ಯಕ್ಕೆ ವೇಗ ದೊರಕಿಸಬೇಕಾದ ಬಗ್ಗೆ ಶ್ರೀ ಕೃಷ್ಣಶರ್ಮ ಅನಾರುವವರು, ಸ್ಥೂಲವಾಗಿ ವಿವರಿಸಿದರು. ಶ್ರೀ ಹರೀಶ್ ಕುಮಾರ್ ವಿಟ್ಲ ಧನ್ಯವಾದ ಸಮರ್ಪಿಸಿದರು. ಶ್ರೀಮತಿ ಚೈತ್ರಾ ನಿಕ್ಷೇಪ್‌ರವರು ಉತ್ತಮವಾಗಿ ಕಾರ್ಯಕ್ರಮ ಸಂಯೋಜನೆ ಮಾಡಿದರು. ರಾಷ್ಟ್ರಗೀತೆಯೊಂದಿಗೆ ಮಹಾಸಭೆ ಮುಕ್ತಾಯವಾಯಿತು.



RAJESH POWER PRESS

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS

Buying and selling shares as easy as checking your emails

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ , ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ , ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಎ. ರಾಘವೇಂದ್ರ ರಾವ್ ಮೈಸೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು , ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು , ಚಿಟ್ಪಾಡಿ ಭುಜಂಗರಾವ್, ಕೋಲ್ಪೆಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು, ಶ್ರೀ ವಸಂತ ಕೇದಿಗೆ ಮಂಗಳೂರು, ಶ್ರೀ ಪಿ. ಪ್ರಭಾಕರ ಭಂಡಿ

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.**

### 2023–24ನೇ ಸಾಲಿನ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಸಮಾಜದ ಹೆತ್ತವರು/ಪೋಷಕರು ಮೇಲಿನ ಸಂಘದ ಸದಸ್ಯರಾಗಿದ್ದು ಅವರ ಮಕ್ಕಳು ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೊಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿದ್ದು, ಹೆತ್ತವರ ವಾರ್ಷಿಕ ಆದಾಯವು ರೂ.3,00,000/–ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸಂಘದ ವಿದ್ಯಾರ್ಥಿ ವೇತನ ಅರ್ಜಿ ಫಾರಂ(ಶ್ರೀ ಶಾರದಾ ಮಂಟಪದಲ್ಲಿ ಲಭ್ಯವಿದೆ)ನ್ನು ಪೂರ್ಣ ಪ್ರಮಾಣದಲ್ಲಿ ಭರ್ತಿಗೊಳಿಸಿ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿಯೊಂದಿಗೆ ದಿನಾಂಕ 30.09.2023 ರೊಳಗೆ ಶ್ರೀ ಶಾರದಾ ಮಂಟಪಕ್ಕೆ ತಲುಪಿಸಬೇಕು.

**– ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಡಾ। ದಯಾನಂದ ಎಸ್.ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**2023–2024**

ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿ ವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿ ವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2023–2024**ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿ ವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ಕೈಬರಹದಲ್ಲಿ ಅರ್ಜಿ ಫಾರಂ ಬರೆದು ಪೋಷಕರ ಸಹಿಯೊಂದಿಗೆ,** ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.30-09-2023**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳೂ ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ಫೋನ್ : 0820-2522408)ಯಲ್ಲಿ ವಿಚಾರಿಸಬಹುದು.**

**–ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2023–2024

**ಉಡುಪಿ ಮತ್ತು ದ.ಕ. ಜಿಲ್ಲೆಗಳ** ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ **ತಾ.30-09-2023**ರೊಳಗೆ **ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**– ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಉದಯಚಂದ್ರ ಪ್ರತಿಭಾ ಪುರಸ್ಕಾರ 2023–2024

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. **2022–23**ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು ಉಡುಪಿ – 576 102** ಇಲ್ಲಿಗೆ ತಾ.30-09-2023ರೊಳಗೆ ಕಳುಹಿಸಿ ಕೊಡಬೇಕು.

**– ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.**

### ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ **2023–24**ನೇ ಸಾಲಿನ **ದಿ। ಡಾ। ವೈ. ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿ ವೇತನಕ್ಕಾಗಿ** ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್ಎಸ್ಎಲ್ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ। ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿ ವೇತನಕ್ಕಾಗಿಯೂ** ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ **ದಿನಾಂಕ 30-11-2023**. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ। ವೈ.ಸುದರ್ಶನ ರಾವ್,**

**ಇಂಚರ ಸರ್ಜಿಕಲ್ ಕ್ಲಿನಿಕ್. ಎ.ಜೆ.ಆಲ್ಸೆ ರಸ್ತೆ, ಪ್ರಸಾದ ನೇತ್ರಾಲಯದ ಎದುರು, ಉಡುಪಿ-576101**

### ದಿ। ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

**ಕೋಂ.ಕೆ. ಸದಾಶಿವ ಶಾಸ್ತ್ರಿ, 3–68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ–575019. ಮೊ : 8762235801.**

### ಪ್ರತಿಭಾ ಪುರಸ್ಕಾರ

2022–23ರ ಸಾಲಿನ ಶೈಕ್ಷಣಿಕ ವರ್ಷದ ಪ್ರೌಢಶಾಲಾ (ಎಸ್.ಎಸ್.ಎಲ್.ಸಿ.) ಮತ್ತು ಪದವಿ ಪೂರ್ವ ಶಿಕ್ಷಣದ ಅಂತಿಮ ಪರೀಕ್ಷೆಯಲ್ಲಿ (ಪಿ.ಯು.ಸಿ.) ವಿಶಿಷ್ಟ ಶ್ರೇಣಿಯಲ್ಲಿ (85% ಅಧಿಕ) ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈರಸ್ತೆ, ಕರಂಗಲ್ಪಾಡಿ, ಮಂಗಳೂರು–4 ಇಲ್ಲಿ ತಾ.29.10.2023ರಂದು ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಗುವುದು. ದ.ಕ. ಮತ್ತು ಉಡುಪಿ ಜಿಲ್ಲಾ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು **ತಾ.30.09.2023**ರ ಒಳಗಾಗಿ ಮೇಲ್ಕಾಣಿಸಿದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

**–ಕೆ. ಸದಾಶಿವ ಶಾಸ್ತ್ರೀ, 8762235801**

### ಶ್ರೀ ಶಂಕರ ಪ್ರತಿಷ್ಠಾನ (ರಿ.)

**ಪ್ರಸಾದ ಭವನ, ಕಾರ್ಕಳ – 574104**

ಪ್ರತೀ ವರ್ಷದಂತೆ ಈ ವರ್ಷವೂ ಕಾರ್ಕಳ ತಾಲೂಕು ಸ್ಥಾನಿಕ ಬ್ರಾಹ್ಮಣ ಸಮಾಜದ ಪ್ರತಿಭಾವಂತ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿಯುಸಿಯಲ್ಲಿ ಪಾಸ್ ಆದ ಎಲ್ಲಾ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿ ವೇತನವನ್ನು ನಮ್ಮ ಸಂಘದ ವಾರ್ಷಿಕೋತ್ಸವ ದಿನದಂದು (30.07.2023 ಆದಿತ್ಯವಾರ) ಗಣ್ಯರ ಸಮ್ಮುಖದಲ್ಲಿ ವಿತರಿಸಲಾಗುವುದು, ಅರ್ಹ ವಿದ್ಯಾರ್ಥಿಗಳಿಗೆ ಈ ವಿಷಯವನ್ನು ಕಾರ್ಕಳ ತಾಲೂಕಿನ ನಮ್ಮ ಸಮಾಜದ ಎಲ್ಲಾ ಮನೆಗಳಿಗೂ ತಲುಪಿಸಿ.

**ವಿದ್ಯಾರ್ಥಿಗಳು ಕೆಳಕಂಡ ವಿಳಾಸಕ್ಕೆ ತಮ್ಮ ಅರ್ಜಿಯೊಂದಿಗೆ, ಮೊಬೈಲ್ ನಂಬರ್, ವಿಳಾಸವನ್ನು ಸ್ಪಷ್ಟವಾಗಿ ನಮೂದಿಸಿ, ಅಂಕಪಟ್ಟಿಯನ್ನು ದಿನಾಂಕ 20.07.2023ರ ಒಳಗೆ ಕಳುಹಿಸಬೇಕು.** ಸ್ಥಾನಿಕ ಬ್ರಾಹ್ಮಣ ಸಮಾಜದ ಕಾರ್ಕಳ ತಾಲೂಕಿನ ವಿದ್ಯಾರ್ಥಿಗಳಲ್ಲದೆ ಬೇರೆ ಸಮಾಜದ ಮಕ್ಕಳ ಅರ್ಜಿಯನ್ನು ಸ್ವೀಕರಿಸುವುದಿಲ್ಲ.

ನೀವು ಸಂಪರ್ಕಿಸಲು :

**ಶ್ರೀ ಕೇಶವ ರಾವ್, ಅಧ್ಯಕ್ಷರು, ಶ್ರೀ ಶಂಕರ ಪ್ರತಿಷ್ಠಾನ (ಮೊ : 9902332609)**
**ಶ್ರೀ ಸತೀಶ್ ರಾವ್ ಕರ್ವಾಲು, ಜೊತೆ ಕಾರ್ಯದರ್ಶಿ (ಮೊ : 94815 11144)**
**ಶ್ರೀ ಭವಾನಿಶಂಕರ ರಾವ್ ಸಂಚಾಲಕರು, ವಿದ್ಯಾನಿಧಿ (ಮೊ : 9980543123)**
**ಶ್ರೀಮತಿ ವಿದ್ಯಾವತಿ ಅಧ್ಯಕ್ಷರು, ಮಹಿಳಾ ವಿಭಾಗ (ಮೊ : 8618035766)**
**ಶ್ರೀಮತಿ ಮಲ್ಲಿಕಾ ಹೆಬ್ಬಾರ್ ಕಾರ್ಯದರ್ಶಿ, ಮಹಿಳಾ ವಿಭಾಗ (ಮೊ : 7353371403)**

ಅಂಕಪ್ರತಿ ಹಾಗೂ ಅರ್ಜಿಯನ್ನು ಕಳುಹಿಸಲು ವಿಳಾಸ :

**ಶ್ರೀ ಸತೀಶ್ ರಾವ್ ಕೆ.**
**ಜೊತೆ ಕಾರ್ಯದರ್ಶಿ, ಶ್ರೀ ಶಂಕರ ಪ್ರತಿಷ್ಠಾನ (ರಿ.), ಕಾರ್ಕಳ**
**ಶ್ರೀ ಮಾತಾ, ಕರ್ವಾಲು ಅಂಚೆ, ಯರ್ಲಪಾಡಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ–574102**

Ph : 98459 92859

Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

## ನಿಧನ



ದಿ। ಶ್ರೀ ಪಿ. ಆನಂದ ರಾವ್ (ಚಿತ್ರಾಪುರ) ಅವರ ಪತ್ನಿ ಶ್ರೀಮತಿ ಗಾಂಧಿನಿ ಅವರು ತಮ್ಮ 87ನೇ ವಯಸ್ಸಿನಲ್ಲಿ ತಾ.12.06.2023 ರಂದು ಚಿತ್ರಾಪುರದಲ್ಲಿ ನಿಧನರಾದರು. ಅವರು ಮೂರು ಗಂಡು ಮಕ್ಕಳನ್ನು ಮತ್ತು ಒಬ್ಬಳು ಮಗಳನ್ನು ಅಗಲಿದ್ದಾರೆ.

★★★★ ★★★★




ಉಡುಪಿ ಕೊರಂಗ್ರಪಾಡಿ ನಿವಾಸಿ ಶ್ರೀ ಎಸ್. ಮೋಹನ್ ರಾವ್ (ದಿ। ಗುಂಡುರಾವ್ ಹಾಗೂ ದಿ। ಭವಾನಿ ಗುಂಡು ರಾವ್ ದಂಪತಿಗಳ ಪುತ್ರ) ಅವರು ತಮ್ಮ 83ನೇ ವಯಸ್ಸಿನಲ್ಲಿ ತಾ.13.06.2023ರ ಬೆಳಿಗ್ಗೆ ಅಲ್ಪಕಾಲದ ಅಸೌಖ್ಯದಿಂದ ಕೊರಂಗ್ರಪಾಡಿಯ ಸ್ವಗಹದಲ್ಲಿ ನಿಧನರಾದರು. ಅವರು ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ಉಡುಪಿ ಹೆಜಮಾಡಿ ಅಪ್ಪಿಲ್ಲ್ ನ ಶ್ರೀ ಶಂಕರ ನಾರಾಯಣ ರಾಯರು ತಮ್ಮ 79ನೇ ವಯಸ್ಸಿನಲ್ಲಿ ತಾ.14.06.2023ರಂದು ನಿಧನರಾದರು. ಅವರು ಪತ್ನಿ, ಒಬ್ಬಳು ಪುತ್ರಿ ಹಾಗೂ ಒಬ್ಬ ಪುತ್ರನನ್ನು ಅಗಲಿದ್ದಾರೆ.

★★★★ ★★★★



ಶ್ರೀ ಅದ್ಯಪಾಡಿ ಶ್ರೀನಿವಾಸ್ ರಾವ್ ಅವರು ತಮ್ಮ 91ನೇ ವಯಸ್ಸಿನಲ್ಲಿ ತಾ.30.06.2023 ರಂದು ಮುಂಬೈನಲ್ಲಿ ನಿಧನರಾದರು. ಅವರು ಮುಂಬೈನ ಶ್ರೀ ಸುಬ್ರಹ್ಮಣ್ಯ ಸಭಾದ ಮಾಜಿ ಅಧ್ಯಕ್ಷರು, BSKBA ಮುಂಬೈನ ಸಕ್ರಿಯ ಪದಾಧಿಕಾರಿಗಳು ಮತ್ತು ಗೋಪಾಲಕೃಷ್ಣ ಅವರ ಟ್ರಸ್ಟಿ ಆಗಿದ್ದರು.

★★★★ ★★★★



ಶ್ರೀಮತಿ ರಾಜೇಶ್ವರಿ ಡಿ. ರಾವ್ ಅವರು ತಮ್ಮ 69ನೇ ವರ್ಷ ವಯಸ್ಸಿನಲ್ಲಿ ತಾ.28.06.2023 ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ತಮ್ಮ ಪತಿ ದಿವಾಕರ ರಾವ್ ಪರಾರಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

★★★★ ★★★★



ದಿವಂಗತ ನೆಟ್ಲ ಗೋಪಾಲಕೃಷ್ಣ ರಾವ್‌ರವರ ಪತ್ನಿ ಸುಳ್ಯದ ಬೈತಡ್ಕ ನಿವಾಸಿ ಶ್ರೀಮತಿ ಪ್ರೇಮಲೀಲಾ ಜಿ. ರಾವ್ ತಮ್ಮ 76ನೇ ವಯಸ್ಸಿನಲ್ಲಿ ತಾ.26.06.2023 ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಒಬ್ಬ ಪುತ್ರ, ಮೂವರು ಪುತ್ರಿಯರು ಹಾಗೂ 7 ಮೊಮ್ಮಕ್ಕಳು ಮತ್ತು ಒಬ್ಬ ಮೊಮ್ಮಗನನ್ನು ಅಗಲಿದ್ದಾರೆ.

## ಶುಭ ವಿವಾಹ

ಶ್ರೀ ಎನ್.ಎಸ್. ರಾಜಾರಾವ್ ಮತ್ತು ಶ್ರೀಮತಿ ರಮಾವಾಣಿ ಮಂಗಳೂರು ಅವರ ಪುತ್ರ **ಚಿ। ರಾಕೇಶ್**ರವರ ವಿವಾಹವು ಶ್ರೀ ಪಿ.ಮುರಳೀಧರ್ ಮತ್ತು ಶ್ರೀಮತಿ ಮಮತಾ (ಬೆಂಗಳೂರು) ಅವರ ಪುತ್ರಿ **ಚಿ।ಸೌ। ಪ್ರತೀಕ್ಷಾ**ರವರೊಂದಿಗೆ ತಾ.25.06.2023ರಂದು ಸಂಘ ನಿಕೇತನ ಸಭಾಂಗಣ ಮಂಗಳೂರಿನಲ್ಲಿ ಜರಗಿತು.

★★★★ ★★★★

ಶ್ರೀಮತಿ ಶಶಿಕಲಾ ಮತ್ತು ಕೀ. ಶೇ. ವ್ಯಾಸ ಅವರ ಪೌತ್ರ, ಶ್ರೀಮತಿ ಅನಿತಾ ಮತ್ತು ಶ್ರೀ ತೇಜಸ್ವಿ ವ್ಯಾಸ ಅವರ ಪುತ್ರ **ಚಿ। ಅಮಿತ್ ವ್ಯಾಸ**ರವರ ವಿವಾಹವು ಶ್ರೀಮತಿ ರಾಜೇಶ್ವರಿ ಮತ್ತು ಕೀ. ಶೇ. ಬಾಲಚಂದ್ರ ರಾವ್ ಅವರ ಪೌತ್ರಿ ಹಾಗೂ ಶ್ರೀ ಮಂಕುಡೆ ಸೂರ್ಯನಾರಾಯಣ ಅವರ ಪುತ್ರಿ **ಚಿ।ಸೌ। ಅಪೂರ್ವ**ರವರೊಂದಿಗೆ ತಾ.09.07.2023 ರಂದು ಉಡುಪಿ ಅಂಬಲ್ಪಾಡಿ ಶ್ಯಾಮಿಲಿ ಸಭಾ ಭವನದಲ್ಲಿ ಜರಗಿತು.

★★★★ ★★★★

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-00ರಿಂದ

**ತಾ.04-08-2023 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.30-07-2023 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.23-07-2023 ಮತ್ತು ತಾ.05-08-2023 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಕರ್ಕಾಟಕ ಮಾಸದ ವಿಶೇಷ ದಿನಗಳು

| | | | |
|---|---|---|---|
| 16.07.2023 | ಕರ್ಕಾಟಕ ಸಂಕ್ರಮಣ | 04.08.2023 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.23 |
| 17.07.2023 | ಆಟಿ ಅಮಾವಾಸ್ಯೆ | | |
| 18.07.2023 | ವರ್ಷ ಋತು ಅಧಿಕ ಶ್ರಾವಣ ಮಾಸದ ಶುಕ್ಲಪಕ್ಷಾರಂಭ | 12.08.2023 | ಸರ್ವೈಕಾದಶಿ |
| | | 16.08.2023 | ಆಟಿ ಅಮಾವಾಸ್ಯೆ ಅಧಿಕ ಮಾಸದ ಮುಕ್ತಾಯ |
| 29.07.2023 | ಸರ್ವೈಕಾದಶಿ | | |
| 01.08.2023 | ಆಟಿ ಹುಣ್ಣಿಮೆ | 17.08.2023 | ವರ್ಷ ಋತು ನಿಜ ಶ್ರಾವಣ ಮಾಸದ ಶುಕ್ಲಪಕ್ಷಾರಂಭ ಸಿಂಹ ಸಂಕ್ರಮಣ |
| 02.08.2023 | ವರ್ಷ ಋತು ಅಧಿಕ ಶ್ರಾವಣ ಮಾಸದ ಕೃಷ್ಣ ಪಕ್ಷಾರಂಭ | | |

## ಉಪನಯನ

ಶ್ರೀ ರಾಘವೇಂದ್ರ ಪ್ರಸಾದ್ ಶ್ಯಾನುಭೋಗ್ ಮತ್ತು ಶ್ರೀಮತಿ ಹರ್ಷಿತಾ ದಂಪತಿಯ ಪುತ್ರ ಹಾಗೂ ಶ್ರೀಮತಿ ಲಲಿತಾ ಶ್ಯಾನುಭೋಗ್ ಮತ್ತು ದಿ। ಡಾ। ಎಂ.ಎಸ್. ಶ್ಯಾನುಭೋಗ್ ಅವರ ಮೊಮ್ಮಗ ಚಿ। ರಾ। ಸ್ಥವೀರ ಅವರ ಉಪನಯನವು ಶ್ರೀ ಜ್ಞಾನಶಕ್ತಿ ಮಂಟಪ ಕೋಡಿಗೆಹಳ್ಳಿ ಬೆಂಗಳೂರು ಇಲ್ಲಿ ಜರಗಿತು.

★★★★ ★★★★

ಮರೂರು ಶ್ರೀಮತಿ ವೇದಾವತಿ ಮತ್ತು ಶ್ರೀ ಮ.ನಾ. ಹೆಬ್ಬಾರ್‌ರ ಪೌತ್ರ, ಶ್ರೀಮತಿ ಛಾಯಾ ಮತ್ತು ಶ್ರೀ ಸುದೀಪ್ ಹೆಬ್ಬಾರ್ ದಂಪತಿಯ ಪುತ್ರ ಚಿ। ಸಂಚಿತ್‌ನ ಬ್ರಹ್ಮೋಪದೇಶವು ತಾ.14.06.2023ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★ ★★★★

ಶ್ರೀ ವಾಗೀಶ್ ಎಚ್.ಜಿ. ಮತ್ತು ಶ್ರೀಮತಿ ಶುಭಾ (ಶ್ರೀ ಚೆಂಡುಕಲಾ ವಿಷ್ಣುರಾವ್ ಮತ್ತು ಶ್ರೀಮತಿ ಯಶೋದಾ ಅವರ ಮೊಮ್ಮಗ) ದಂಪತಿಯ ಪುತ್ರ ಚಿ। ರಿಷಭ್ ರಾವ್‌ನ ಬ್ರಹ್ಮೋಪದೇಶವು ತಾ.21.06.2023ರಂದು ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಜರಗಿತು.

★★★★ ★★★★

ಶ್ರೀ ಅನಿಲ್ ರಾವ್ ಮತ್ತು ಶ್ರೀಮತಿ ಸವಿತಾ (ಶ್ರೀ ಬೈಲಕೆರೆ ಗೋವಿಂದ್ ರಾವ್ ಮತ್ತು ಶ್ರೀಮತಿ ಅರುಂಧತಿ ರಾವ್ ಅವರ ಮೊಮ್ಮಗ) ದಂಪತಿಯ ಪುತ್ರ ಚಿ। ಆರವ್ ರಾವ್ ಅವರ ಉಪನಯನವು ತಾ.25.06.2023 ರಂದು ಶ್ರೀ ಪ್ರಸನ್ನ ಕಲ್ಯಾಣಮಂದಿರ ಜಯನಗರ ಬೆಂಗಳೂರಿನಲ್ಲಿ ಜರಗಿತು.

ಶ್ರೀಮತಿ ಮೋಹಿನಿ ಆಳುಗ್ಗೇಲು ಮತ್ತು ಕೀ. ಶೇ. ರವಿಶಂಕರ್ ರಾವ್ ಅವರ ಪುತ್ರ **ಚಿ। ವಿಜೇತ್**ರವರ ವಿವಾಹವು ಶ್ರೀಮತಿ ಆಶಾ ಮತ್ತು ಶ್ರೀ ಸುರೇಶ್ಚಂದ್ರ ರಾವ್ ಇನ್ನ ಕಲ್ಲಟ್ಟೆ ಅವರ ಪುತ್ರಿ **ಚಿ।ಸೌ। ಕಮಲಿನಿ**ರವರೊಂದಿಗೆ ತಾ.09.07.2023ರಂದು ಎರ್ಮಾಳು ಶ್ರೀ ಜನಾರ್ಧನ ಜನ ಕಲ್ಯಾಣ ಸಭಾಂಗಣದಲ್ಲಿ ಜರಗಿತು.








*With Best Complimemts From*

SRI M. SHAILESH RAO Ph : 9448624324

B.E., Civil

Civil Engineer & Contractor

**SRI MALAVIKA ASSOCIATES**

KALSANKA-UDUPI ROAD, UDUPI.

Website : shreemaalavikaassociates.com



# ಕಡಲತೀರದ ಸುಂದರ ಊರು

– ರಶ್ಮಿ ಉಳಿಯಾರು, ಬೆಂಗಳೂರು.

ಕೃಷ್ಣನ ಉಡುಪಿಯ ಪಡುವಣ ಕಡಲ ತೀರದ ಬಳಿಯ ಒಂದು ಪುಟ್ಟ ಊರಿನವಳು ನಾನು. ಹಳ್ಳಿಯಾದರೂ ತೀರಾ ಕುಗ್ರಾಮದಂತಹ ಪ್ರದೇಶವಲ್ಲ. ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ತಾಲೂಕಿನಿಂದ ಸುಮಾರು ಮೂರು ಕಿ.ಮೀ. ದೂರವಿದೆ ಅಷ್ಟೇ. ಇಡೀ ಕರ್ನಾಟಕದಲ್ಲೇ ಅತ್ಯಂತ ಸುಂದರವಾದ ಸಮುದ್ರ ತೀರ ನಮ್ಮೂರಿನಲ್ಲಿದೆ. ಬ್ರಿಟಿಷರ ಕಾಲದ ಎತ್ತರವಾದ ದೀಪಸ್ತಂಭ ಮತ್ತು ಟಿಪ್ಪು ಸುಲ್ತಾನನ ಕೋಟೆಯ ಅವಶೇಷ, ಅಲ್ಲಲ್ಲಿ ಬಂಡೆ ಸಾಲುಗಳನ್ನು ಒಳಗೊಂಡ ಈ ಸಮುದ್ರ ತಟ ನನ್ನೂರಿನ ಹೆಮ್ಮೆಯ ಗುರುತು ಅಂತ ಹೇಳಿದರೆ ತಪ್ಪಾಗಲಾರದು.

ನಮ್ಮ ಮನೆಯಿಂದ ಕೇವಲ ನಾಲ್ಕು ಕಿ.ಮೀ. ದೂರ ಇರುವ ಸಮುದ್ರ ತೀರ ನಮ್ಮೆಲ್ಲರ ಇಷ್ಟದ ಜಾಗ. ಆಗಲೂ, ಈಗಲೂ ಮತ್ತು ಎಂದೆಂದಿಗೂ... ಈಗ ನನ್ನ ಮಗುವಿಗೂ ಊರಿಗೆ ಬಂದರೆ ಒಮ್ಮೆಯಾದರೂ ಹೋಗಲೇಬೇಕು. ಬಂದ ಕೂಡಲೇ "ಅಜ್ಜಾ ಬೀಚ್'ಗ್ ಏಪ ಪೋಪುಣಾ ನಮಾ?" (ಅಜ್ಜಾ ಕಡಲತೀರಕ್ಕೆ ಯಾವಾಗ ಹೋಗುವುದು?) ಪ್ರಶ್ನೆ ಶುರುವಾಗುತ್ತದೆ ಅವಳದು. ಬಾಲ್ಯದಲ್ಲಿ ವಾರಕ್ಕೊಮ್ಮೆಯಾದರೂ ಬೀಚಿಗೆ ಹೋಗಿ ಮರಳಲ್ಲಿ ಮತ್ತು ನೀರಲ್ಲಿ ಆಟವಾಡುವುದು, ದೀಪಸ್ತಂಭದ ಸುರುಳಿಯಾಕಾರದ ಪಾವಟಿಗೆಗಳನ್ನು ಹತ್ತಿ ತುದಿಯಲ್ಲಿ ನಿಂತು ದೂರದ ಮಣಿಪಾಲದವರೆಗಿನ ವಿಶಾಲ ಹಸಿರಿನತ್ತ ದೃಷ್ಟಿ ಹಾಯಿಸುವುದು ಮತ್ತು ಇಳಿ ಸಂಜೆಯ ಅದ್ಭುತ ಸೂರ್ಯಾಸ್ತವನ್ನು ಮರಳ ಮೇಲೆ ಕುಳಿತು ಮನದಣಿಯೇ ನೋಡುವುದು... ಇವೆಲ್ಲಾ ನನಗೆ ಅಚ್ಚುಮೆಚ್ಚಿನ ಸಂಗತಿಗಳಾಗಿದ್ದವು. ಯಾರೇ ಅತಿಥಿಗಳು ಮನೆಗೆ ಬರಲಿ "ಬೀಚ್'ಗ್ ಪೋಯಾ ಇನಿ?" (ಕಡಲತೀರಕ್ಕೆ ಹೋಗೋಣವಾ ಇವತ್ತು?) ಅನ್ನುವ ಮಾತು ಖಾಯಂ... ಸಂಜೆ ನಾಲ್ಕಾಗುತ್ತಿದ್ದಂತೆ ಎಲ್ಲರ ಸವಾರಿ ಅತ್ತಲೇ ಹೊರಡುತ್ತಿತ್ತು...

ದೀಪಾವಳಿಯ ಪಾಡ್ಯದ ದಿನ ಅಲ್ಲಿ ಸಾಗರ ತಟದಲ್ಲಿ ಜನಸಾಗರ. ಆ ದಿನ ಕಡಲ ತೀರಕ್ಕೆ ಭೇಟಿ ನೀಡುವುದು ಒಂದು ಸಂಪ್ರದಾಯವೆಂದೇ ಹೇಳಬಹುದು. ಅನೇಕ ಹಳೆಯ ಪರಿಚಿತರ ಮುಖಾಮುಖಿ ಅಲ್ಲಾಗುತ್ತಿತ್ತು. ಈಗ ಮಹಾನಗರದಲ್ಲಿರುವ ನನಗೆ ಊರಿನ ನೆನಪಾದಾಗಲೆಲ್ಲ ಮನಸ್ಸು ಸಮುದ್ರ ತೀರದತ್ತಲೇ ತುಡಿಯುತ್ತದೆ. ಸಿಹಿ ನೆನಪುಗಳು ಮೆರವಣಿಗೆ ಹೊರಡುತ್ತವೆ.

ನನ್ನ ಸುಂದರವಾದ ಪುಟ್ಟ ಊರಿನ ಹೆಸರು ಕಾಪು ತಾಲೂಕಿನ ಉಳಿಯಾರು. ತೆಂಗು, ಕಂಗು, ಬಾಳೆ ತೋಟಗಳು, ಭತ್ತದ ಬೈಲುಗಳಿಂದ ಕೂಡಿದ ಹಚ್ಚ ಹಸಿರಿನ ಪ್ರದೇಶ. ಈಗ ತಾರಸಿಯ ಮನೆಗಳು ಹೆಚ್ಚಾದರೂ ಕೆಲವು ಚೆಂದದ ಹಂಚಿನ, ಕೆಂಪು ಕಾವಿಯ ತಂಪು ನೆಲದ ಮನೆಗಳು ಇನ್ನೂ ಇವೆ. 'ಕಾಪು' ಎಂದರೆ ತುಳುವಿನಲ್ಲಿ ರಕ್ಷಿಸು/ಕಾಪಾಡು, ಹಳೆಗನ್ನಡದಲ್ಲಿ ಕಾವಲು ಎಂದರ್ಥ. ನಮ್ಮೂರಿನ ಮೂಲಕ ಹಾದು ಹೋಗುವ ಉಡುಪಿ–ಮಂಗಳೂರು ಹೆದ್ದಾರಿಯ ಪಕ್ಕದಲ್ಲಿ ಪ್ರಸಿದ್ಧ ಹೊಸ ಮಾರಿಗುಡಿ ಇದೆ. ತುಳುವರ ಆರಾಧ್ಯ ದೇವತೆ ಮಾರಿಯಮ್ಮ ಇಲ್ಲಿ ವಿರಾಜಮಾನಳಾಗಿದ್ದಾಳೆ. ಹಳೆ ಮಾರಿಗುಡಿ, ನಡು ಮಾರಿಗುಡಿ ಮತ್ತು ಹೊಸ ಮಾರಿಗುಡಿ ಈ ತರಹ ಮೂರು ದೇವಾಲಯಗಳಿವೆ. "ಮಾರಿಯಮ್ಮ ಕಾಪುಲಪ್ಪೆ ಎಂಕ್ಲೆನು" (ಕಾಪಾಡಮ್ಮ ತಾಯಿ ನಮ್ಮೆಲ್ಲರನೂ) ಅನ್ನುವುದು ತುಳುವರ ಅನುದಿನದ ಪ್ರಾರ್ಥನೆ. ಆ ತಾಯಿಯಿಂದಲೇ ಊರಿಗೆ ಕಾಪು ಎಂಬ ಹೆಸರು ಬಂದಿದೆ. ಬಹಳ ಹಿಂದೆ ಜೈನರು ನೆಲೆಸಿದ್ದ ಕಾಲದಲ್ಲಿ ಊರಿಗೆ ರಕ್ಷಣಾಪುರವೆಂಬ ಹೆಸರೂ ಇತ್ತಂತೆ. ಅದರ ಕುರುಹೇನೋ ಎಂಬಂತೆ ಹೆದ್ದಾರಿಯ ಇನ್ನೊಂದು ಪಕ್ಕದಲ್ಲಿ ಬಸದಿಯೊಂದು ಸಾಕ್ಷಿಯಾಗಿ ನಿಂತಿದೆ.

'ಭಜನೆಗೊಲಿವ ದೇವಿ', 'ಜ್ಞಾನ ಪ್ರದಾಯಿನಿ' ಎಂದೇ ಖ್ಯಾತಿ ಇರುವ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸುಂದರ ವಾಸ್ತುಶಿಲ್ಪ ಕಲೆ ಇರುವ ದೇವಾಲಯವೊಂದು ನಮ್ಮ ಮನೆಯ ಪಕ್ಕದಲ್ಲೇ ಇದೆ. ಸುಮಾರು ಅರ್ಧದಿಂದ ಒಂದು ಕಿ.ಮೀ ಅಂತರದಲ್ಲಿ ಅನೇಕ ಪುಟ್ಟ ಪುಟ್ಟ ಊರುಗಳೂ, ಬಹಳಷ್ಟು ದೇವಸ್ಥಾನಗಳೂ ಇವೆ. ನಮ್ಮ ಊರಿನ ಹಿಂದೆ ಸಣ್ಣ ಕಾಡಿನ ನಡುವೆ ದೊಡ್ಡ ಕಲ್ಲಿನ ಬೆಟ್ಟವಿದೆ. ಅದನ್ನು ಕೊಂಕಣ ಪಾದೆ ಎಂದೂ ಕರೆಯುತ್ತೇವೆ. ಅದರಲ್ಲಿ ಯಾವಾಗಲೂ ನೀರಿರುವ ಒಂದು ಚಿಕ್ಕ ಕೊಳ ಮತ್ತು ದೇವಿ ಮೊದಲು ನೆಲೆಸಿದ್ದ ಚಿಕ್ಕ ಗುಡಿ ಇದೆ. ಅಲ್ಲಿಂದ ನಿಂತು ಪಶ್ಚಿಮದತ್ತ ನೋಡಿದರೆ ಚೆಂದದ ಸೂರ್ಯಾಸ್ತ ಮತ್ತು ದೂರದ ಸಮುದ್ರ ತೀರ ಕಾಣುತ್ತದೆ. ಹಾಗೆ ಸಂಜೆ ಅಲ್ಲಿಗೆ ಹೋಗುವುದು ನಮ್ಮ ಊರಿನ ಹೆಚ್ಚಿನ ಜನರಿಗೆ ಇಷ್ಟ. ನಾವೆಲ್ಲ ಬಾಲ್ಯದಲ್ಲಿ ಕೆಲವೊಮ್ಮೆ ಅಲ್ಲಿ ಗಾಳಿ ಪಟ ಬಿಡುವ ಆಟವಾಡುತ್ತಾ ಇದ್ದೆವು. ಊರಿನ ಮಧ್ಯೆ ಕೊಂಕಣ ರೈಲ್ವೆ ಮಾರ್ಗ ಹಾದು ಹೋಗಿದೆ. ಒಂದು ಚಿಕ್ಕ ಹೊಳೆ ಕೂಡ ನಮ್ಮ ಊರನ್ನು ಸುತ್ತಿ ಹರಿಯುತ್ತದೆ...ಬಿಳಿ ಮರಳಿನ ಸ್ವಚ್ಛ ಸುಂದರ ಕಡಲ ತೀರಗಳು, ಇಡೀ ಉಡುಪಿ ಜಿಲ್ಲೆಯ ತುಂಬಾ ಅಲ್ಲಲ್ಲಿ ಚದುರಿಹೋಗಿ ನಿತ್ಯ ಭಕ್ತರಲ್ಲಿ ದೈವಿಕ ಭಾವವನ್ನು ಉದ್ದೀಪಿಸುವ ಚೆಂದದ ನೂರಾರು ದೇವಸ್ಥಾನಗಳು, ಚರ್ಚ್‌ಗಳು, ಮಸೀದಿಗಳು, ತೆಂಗಿನೆಣ್ಣೆ, ತೆಂಗಿನಕಾಯಿ ಮತ್ತು ಬೆಲ್ಲ ಕೊಂಚ ಹೆಚ್ಚು ಬಳಸುವ ವಿಶ್ವ ಪ್ರಸಿದ್ಧ ಉಡುಪಿ ಅಡುಗೆಯ ರುಚಿ, ಯಕ್ಷಗಾನ, ದೈವ ಭೂತ ಕೋಲ, ತುಳು ಪಾಡ್ದನ, ಕೋಣಗಳ ಕಂಬಳ, ನಾಗಾರಾಧನೆ, ಉಡುಪಿ (ಶಂಕರಪುರ ಮಲ್ಲಿಗೆ), ಅತ್ಯುತ್ತಮ ಶಿಕ್ಷಣ ನೀಡುತ್ತಿರುವ ಶಾಲಾ ಕಾಲೇಜುಗಳು... ಓಹ್! ನನ್ನೂರಿನ ವಿಶೇಷತೆಗಳು ಒಂದೇ ಎರಡೇ... ದ.ಕ ಮತ್ತು ಉಡುಪಿಯ ಎಲ್ಲರೂ ಸೇರಿ ಯಾವುದೇ ಜಾತಿ, ಧರ್ಮ, ಮತಗಳ ಭೇದಭಾವ ಇಲ್ಲದೇ ತುಳುವರು ಎನ್ನುವುದು ನಮ್ಮ ವಿಶಿಷ್ಟವಾದ ಹೆಗ್ಗುರುತು. ನಮ್ಮಲ್ಲಿ ಹೆಚ್ಚಿನವರಿಗೆ ದೈವ ದೇವರಲ್ಲಿ ಗಾಢವಾದ ಭಕ್ತಿಭಾವ ಅವರವರ ವ್ಯಕ್ತಿತ್ವದಲ್ಲೇ ಮಿಳಿತವಾಗಿರುತ್ತದೆ.

ನಮ್ಮ ಭಾಷೆ ಮಂಗಳೂರು ಕನ್ನಡ ಅಂತಲೇ ಪ್ರಸಿದ್ಧವಾದ ಭಾಷೆ. ಮೊದಲು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಾಗಿದ್ದದ್ದು 1997ರಲ್ಲಿ ಉಡುಪಿ ಜಿಲ್ಲೆಯಾಗಿ ವಿಭಾಗವಾದ ಮೇಲೆ ಉಡುಪಿ ಕನ್ನಡ ಅಂತ ಅದನ್ನು ಹೇಳಬಹುದೇನೋ... ಪ್ರದೇಶಕ್ಕನುಗುಣವಾಗಿ ಮಾತನಾಡುವ ಕೆಲ ಶಬ್ದಗಳು ಬೇರೆಯಾಗಿರಬಹುದಾದರೂ ಎರಡರಲ್ಲೂ ಹೆಚ್ಚಿನ ವ್ಯತ್ಯಾಸಗಳಿಲ್ಲ. ಜಿಲ್ಲೆಯಾಗಿ ಉದಯಿಸಿದಾಗ ಉಡುಪಿ, ಕಾರ್ಕಳ ಮತ್ತು ಕುಂದಾಪುರ ಎಂಬ ಮೂರು ತಾಲೂಕುಗಳಿದ್ದು, ತೀರಾ ಇತ್ತೀಚೆಗೆ ಬೈಂದೂರು, ಹೆಬ್ರಿ, ಬ್ರಹ್ಮಾವರ ಸೇರಿದಂತೆ ನಮ್ಮ ಕಾಪು ಕೂಡ ತಾಲೂಕಾಗಿ ಗುರುತಿಸಲ್ಪಟ್ಟಿವೆ.

ಉಡುಪಿ, ದಕ್ಷಿಣ ಕನ್ನಡ ಮತ್ತು ಕಾಸರಗೋಡಿನ ಕೆಲ ಭಾಗ ಬಿಟ್ಟು ಬೇರೆ ಕಡೆ ನಾವು ಕನ್ನಡ ಮಾತನಾಡಿದರೆ ತಟ್ಟನೆ ಬರುವ ಪ್ರಶ್ನೆ 'ನಿಮ್ಮದು ಸೌತ್ ಕೆನರಾನಾ ಅಥವಾ ಮಂಗಳೂರಾ?' ಅಂತ. ಮಾತನಾಡುವ ಕನ್ನಡ ಭಾಷೆಯೇ ರೀತಿಯೇ ಅಷ್ಟು ವಿಶಿಷ್ಟ. ಎಷ್ಟು ಬೇರೆಯ ತರಹದ ಕನ್ನಡ ಕಲಿತೆವು ಎಂದುಕೊಂಡರೂ ಮಾತಿನ ಮಧ್ಯೆ ನಮ್ಮ ಊರಿನ ಭಾಷೆ ಇಣುಕಿಯೇ ಬಿಡುತ್ತದೆ. ಕನ್ನಡ ಭಾಷೆಯನ್ನು ಆಡುವ ಶೈಲಿ ಮತ್ತು ಉಚ್ಚಾರಣೆಯಲ್ಲಿ ಗೊತ್ತಾಗಿ ಬಿಡುತ್ತದೆ. ನಾವು ಕನ್ನಡದಲ್ಲಿ ಮಾತನಾಡುವಾಗ ಕೆಲವೊಮ್ಮೆ ತುಳು ಭಾಷೆಯ ಶಬ್ದಗಳು ಬಂದೇ ಬರುತ್ತವೆ. ಉದಾ: ಸಾವು ಮಾರ್ರೆ, ಎಂತ, ನರಕ... ಇತ್ಯಾದಿ. ಒಂದು ವೇಳೆ ಪರವೂರಿನಲ್ಲಿ ಎಲ್ಲಾದರೂ ತುಳು ಶಬ್ಧ ಕಿವಿಗೆ ಬಿದ್ದರೆ ಸಾಕು, ಅಪರಿಚಿತರನ್ನೂ ಪರಿಚಯಿಸಿಕೊಂಡು ಆತ್ಮೀಯವಾಗುವ ನಮಗೆ ನಂತರದ ಮಾತುಕತೆಗಳೆಲ್ಲಾ ತುಳುವಿನಲ್ಲೇ...

ಇದೆ ಎನ್ನುವುದಕ್ಕೆ ಉಂಟು ಅಂತಲೇ ಹೇಳುವುದು, ಏನು ಕೇಳುವುದಕ್ಕೆ ಎಂತ ಹೀಗೆ ಕೆಲ ಶಬ್ಧಗಳು ಅಚ್ಚೊತ್ತಿವೆ. ನಮ್ಮ ಬುದ್ಧಿ ಮತ್ತು ಭಾವದೊಳಗೆ ನಮ್ಮ ಭಾಷೆ ಸೇರಿಹೋಗಿದೆ. ನಾಲಿಗೆಗೆ ಅಭ್ಯಾಸವಾಗಿಬಿಟ್ಟಿದೆ. ಕೆಲವರು ಹೇಳುವ ಪ್ರಕಾರ ನಾವು ಮಾತನಾಡುವ ಕನ್ನಡ ಶಿಷ್ಟ ಕನ್ನಡವಂತೆ. ಪುಸ್ತಕದಲ್ಲಿ ಮುದ್ರಿಸಿದ ರೀತಿಯಲ್ಲೇ ಪದಗಳನ್ನು ಬಿಡಿಸಿ ಮಾತನಾಡುತ್ತೇವೆ ಎಂದು ಹೇಳುವುದು ಕೇಳಿದ್ದೇನೆ.

ಬಾರನಾ, ಎಂತನಾ, ಬೇಡನಾ, ಹೋಗುವನಾ... ಹೀಗೆ ಮಕ್ಕಳು ಮಾತನಾಡುವುದು ನೀವು ಕೇಳಬೇಕು, ಮಜವಾಗಿರುತ್ತದೆ. ತುಳು ಮಾತನಾಡುವ ಮನೆಗಳ ಮಕ್ಕಳು ಮೊದಲು ಶಾಲೆಗೆ ಸೇರುವಾಗ ಎರಡೂ ಭಾಷೆ ಮಿಶ್ರಿತ ಕನ್ನಡವನ್ನು ಮಾತನಾಡುವುದು ಸಹಜ. ನಂತರ ನಿಧಾನವಾಗಿ ಕನ್ನಡ ಅಭ್ಯಾಸವಾಗುತ್ತದೆ.

"ಎಂತದಾ ನಿಮ್ಗೆ ಭಾಷೆ ಇಲ್ವಾ...?!"



ಬೈಗುಳ. ಹಾಗೆಂದರೆ ಯಾರಿಗಾದರೂ ಹೇಳಿದ್ದು ಎಷ್ಟು ಅರ್ಥ ಮಾಡಿಸಿದರೂ ಆಗದಿದ್ದರೆ/ ಅರ್ಥವಾದರೂ ಹೇಳಿದ ಹಾಗೆ ಮಾಡದಿದ್ದರೆ/ ತಂಟೆ ಮಾಡಿದರೆ/ ಹೇಳಿದ್ದು ಕೇಳದಿದ್ದರೆ ಆಗ 'ನಿಂಗೆ ಭಾಷೆ ಇಲ್ವಾ' ಅಂತ ಬೈಯುವುದು ಸಾಮಾನ್ಯ. ಕೇಳಿಸಿಕೊಂಡವರಿಗೆ ನೋವು ಅಥವಾ ಬೇಜಾರು ಖಂಡಿತಾ ಆಗುವುದಿಲ್ಲ. ಅಷ್ಟು ಸರಳ. ಹೇಗಿದೆ ನೋಡಿ. ನಮಗೆ ಬೈಯಲೂ ಬರುವುದಿಲ್ಲ ಅಲ್ಲವೇ...?!

ಇಡೀ ಉಡುಪಿ ಜಿಲ್ಲೆಯಾದ್ಯಂತ ತುಳು, ಬ್ರಾಹ್ಮಣರ ತುಳು, ಕ್ರಿಶ್ಚಿಯನ್ ಕೊಂಕಣಿ, ಜಿ.ಎಸ್.ಬಿ ಕೊಂಕಣಿ, ಬ್ಯಾರಿ ಭಾಷೆ, ಉರ್ದು, ಕುಂದಗನ್ನಡ, ಹವ್ಯಕ ಕನ್ನಡ... ಹೀಗೆ ವಿವಿಧ ಬಗೆಯ ಭಾಷೆಗಳನ್ನು ಮನೆಯಲ್ಲಿ ಮಾತನಾಡುವ ಜನರಿದ್ದಾರೆ. ಆದರೂ ಎಲ್ಲರಿಗೂ ಕನ್ನಡ ಸುರಳೀತ. ಊರಿನಲ್ಲಿ ಹೆಚ್ಚಾಗಿ ಪರಿಚಿತರೊಂದಿಗೆ ತುಳುವಿನಲ್ಲೇ ಸಂಭಾಷಣೆ ನಡೆಸುವ ನಾವು ಅಪರಿಚಿತರೊಂದಿಗೆ ಕನ್ನಡದಲ್ಲಿ ಮಾತುಕತೆ ನಡೆಸುತ್ತೇವೆ. ನಮಗೆಲ್ಲ ಅದೊಂದು ಅಭ್ಯಾಸ. ಮಾಂಸಾಹಾರಿ ಅಡುಗೆಗಳನ್ನು ಹೊರತುಪಡಿಸಿ ಬೆಳ್ಳುಳ್ಳಿ ಮತ್ತು ನೀರುಳ್ಳಿಯನ್ನು ಬಳಸದೇ ಮಾಡುವ ಸಾತ್ವಿಕ ಆಹಾರಪದ್ಧತಿಗೆ ಉಡುಪಿಯಡುಗೆ ಪ್ರಸಿದ್ಧ. ಅನೇಕ ದೇವಸ್ಥಾನಗಳಲ್ಲಿ ನಿತ್ಯ ಅನ್ನ ದಾಸೋಹವೂ ಜರುತ್ತದೆ. ಜನಪ್ರಿಯ ಪ್ರವಾಸಿ ತಾಣಗಳೂ ಬಹಳ ಇರುವ ನನ್ನೂರು ಮತ್ತು ಅದರೊಂದಿಗೆ ಬೆಸೆದುಕೊಂಡ ನನ್ನ ಭಾಷೆಯ ಸವಿನೆನಪುಗಳು ಬಿಟ್ಟರೂ ಬಿಡಲಾಗದ ಅನುಬಂಧವೇ ಸರಿ.

ಸ್ವಂತ ಊರು ಮತ್ತು ಭಾಷೆ ಎನ್ನುವುದು ಒಬ್ಬ ಮನುಷ್ಯನ ವ್ಯಕ್ತಿತ್ವ ಮತ್ತು ಅಸ್ತಿತ್ವದ ಗುರುತು. ಸಾವಿರಾರು ನೆನಪುಗಳ ತಿಜೋರಿ. ಅನಿವಾರ್ಯವಾಗಿ ಪರವೂರು ಸೇರಿಕೊಂಡರೂ ಹುಟ್ಟಿ ಬೆಳೆದ ಊರಿನ ತಂತು ಕಡಿದು ಹೋಗಲಾರದು. ಅದು ಒಂದು ತರಹ ಹೆತ್ತಮ್ಮನೊಂದಿಗಿನ ಕರುಳ ಬಳ್ಳಿಯ ಸಂಬಂಧವೇ ಸರಿ. ಅಮ್ಮ ಜೀವ ನೀಡುತ್ತಾಳಾದರೆ ಹುಟ್ಟೂರು ಮತ್ತು ಮಾತೃಭಾಷೆ ಜೀವನದ ಉಳಿದ ಸಂಗತಿಗಳನ್ನು ನಮ್ಮಲ್ಲಿ ಹದವಾಗಿ ತುಂಬುತ್ತದೆ. ಸ್ವಂತ ಊರು ಮತ್ತು ಭಾಷೆ ಎಂಬುದು ಮನುಷ್ಯನ ಮನೋಭೂಮಿಕೆ ತಳಹದಿಯಾಗಿ ಅವನ ಒಟ್ಟು ವ್ಯಕ್ತಿತ್ವಕ್ಕೆ ಮತ್ತು ಯೋಚನೆಗಳಿಗೆ ಒಳ ಹೂರಣ ಮತ್ತು ಸತ್ವವನ್ನು ಒದಗಿಸಿಕೊಡುತ್ತವೆ. ನೆನೆದಾಗಲೆಲ್ಲ ಹೃದಯದಲ್ಲಿ ಭಾವಗಳು ಜಿನುಗುತ್ತಾ ಕಂಗಳು ಪಸೆಯಾಡುತ್ತವೆ. ಅವುಗಳೊಂದಿಗೆ ನಮ್ಮದು ಬದುಕಿಡೀ ಬಲವಾಗಿ ಬೆಸೆದುಕೊಂಡ ಸುಂದರ ಬಂಧನ.


## ದೇವಿಕೃಪಾ ಏಜೆನ್ಸೀಸ್, ನಂದಿಕೂರು



ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ

## ಹೆಬ್ಬಾರ್ ಎಂಟರ್‌ಪ್ರೈಸಸ್

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ, ಮುಂಬಯಿ : ವಾರ್ಷಿಕ ಮಹಾಸಭೆ




ತಾ.11.06.2023ರಂದು ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ, ಮುಂಬಯಿ ಇದರ 84ನೇ ವಾರ್ಷಿಕ ಮಹಾಸಭೆಯು ಮುಂಬಯಿಯ ಶ್ರೀ ಸುಬ್ರಹ್ಮಣ್ಯ ಮಠ, ಚೆಂಬೂರು ಇಲ್ಲಿ ಜರುಗಿತು. ಶೆ.70ಕ್ಕೂ ಮಿಕ್ಕಿ ಅಂಕಗಳಿಸಿದ ಸಂಘದ ಸದಸ್ಯರ ಮಕ್ಕಳಿಗೆ ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ಕ್ಷಮಾ ಸುರೇಶ್ ರಾವ್ ಬರೆದ ಆದಿಶಂಕರಾಚಾರ್ಯ ಪುಸ್ತಕ ಬಿಡುಗಡೆಗೊಳಿಸಲಾಯಿತು.

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ ಅಧ್ಯಕ್ಷರಾಗಿ ಮಿತ್ತಬಾಗಿಲು ಕಕ್ಕೆನೇಜಿ ಶ್ರೀ ಶಿವಾನಂದ ರಾವ್ ಆಯ್ಕೆ



ದಿನಾಂಕ 29-06-2023, ನೇ ಗುರುವಾರದಂದು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ ಇದರ, ಮಹಾಸಭೆಯು ಲಾಯಿಲದಲ್ಲಿರುವ ಸಭಾದ ಸಭಾಭವನದಲ್ಲಿ ನಡೆಯಿತು . ಸಭಾದ ಅಧ್ಯಕ್ಷ ರಾದ ಶ್ರೀ ಪಿ.ರಾಧಾಕೃಷ್ಣ ರಾವ್ ರವರ ಅಧ್ಯಕ್ಷತೆಯಲ್ಲಿ ನಡೆದ ಮಹಾಸಭೆಯಲ್ಲಿ ಮುಂದಿನ 2 ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಶ್ರೀ ಶಿವಾನಂದ ರಾವ್, ಕಕ್ಕೆನೇಜಿ, ಕಾರ್ಯದರ್ಶಿಯಾಗಿ ಶ್ರೀ ವಿಕಾಸ್ ರಾವ್ ಉಜಿರೆ ಆಯ್ಕೆ ಯಾದರು. ಉಪಾಧ್ಯಕ್ಷರುಗಳಾಗಿ ಶ್ರೀ ಪವನ್ ರಾವ್ ಚಾರ್ಮಾಡಿ, ಶ್ರೀ ಸೂರ್ಯಾನಂದ ರಾವ್ ಧರ್ಮಸ್ಥಳ , ಶ್ರೀ ಅನಿಲ್ ಅಧಿಕಾರಿ ಮಡಂತ್ಯಾರು, ಶ್ರೀ ರತ್ನಾಕರ ರಾವ್ ನಾರಾವಿ, ಶ್ರೀಮತಿ ನಾಗರತ್ನ ಉಮೇಶ್ ರಾವ್ ಕೊಲ್ಲಿ ಪಾಲು, ಜೊತೆ ಕಾರ್ಯದರ್ಶಿ ಯಾಗಿ ಶ್ರೀ ಕೃಷ್ಣ ಕುಮಾರ್ ಬೆಳ್ತಂಗಡಿ, ಕೋಶಾಧಿಕಾರಿಯಾಗಿ ಶ್ರೀಮತಿ ರೇಖಾ ಸುಧೀರ್ ಬೆಳ್ತಂಗಡಿ ಇವರುಗಳು ಆಯ್ಕೆಯಾದರು. ಶ್ರೀ ಅರುಣ್ ಕುಮಾರ್ ಎಂ.ಎಸ್ ದಿಶಾ ಇವರು ನಮ್ಮ ಸಭಾ ನಡೆದು ಬಂದ ದಾರಿ, ಕಳೆದ 2 ವರ್ಷದಲ್ಲಿ ಸಭಾದ ಮೂಲಕ ನಿರ್ವಹಿಸಲ್ಪಟ್ಟ ಅವಿಸ್ಮರಣೀಯ ಕಾರ್ಯಕ್ರಮಗಳ ಕುರಿತು ಪ್ರಸ್ತಾಪಿಸಿ ನಿರ್ಗಮನ ಸಮಿತಿಗೆ ಅಭಿನಂದನೆ ಸಲ್ಲಿಸಿದರು. 2 ವರ್ಷಗಳ ರಜತ ಸಂಭ್ರಮದಲ್ಲಿ ಸಹಕರಿಸಿದ ಎಲ್ಲರಿಗೂ ನಿರ್ಗಮನ ಅಧ್ಯಕ್ಷರಾದ ಶ್ರೀ ಪಿ. ರಾಧಾಕೃಷ್ಣ ರಾವ್ ಕೃತಜ್ಞತೆ ಸಮರ್ಪಿಸಿದರು. ಇಂದಿನ ಕಾರ್ಯಕ್ರಮದಲ್ಲಿ ಸಮಾಜದ 23 ವಿದ್ಯಾರ್ಥಿಗಳಿಗೆ ರೂ.2,30,000-00 ಮೊತ್ತದ ವಿದ್ಯಾರ್ಥಿ ಪ್ರೋತ್ಸಾಹ ನಿಧಿಯನ್ನು ವಿತರಿಸಲಾಯಿತು. ಇಬ್ಬರು ಸದಸ್ಯರಿಗೆ ರೂ. 20,000-00 ಮೊತ್ತದ ವೈದ್ಯಕೀಯ ನಿಧಿಯನ್ನು ನೀಡಲಾಯಿತು. ಈ ಎಲ್ಲಾ ಮೊತ್ತವನ್ನು ಸಮಾಜದ ಸದಸ್ಯರೇ ಪ್ರಾಯೋಜಿಸಿರುತ್ತಾರೆ. 2022-23ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ ಗಳನ್ನು ಗೌರವಿಸಲಾಯಿತು. ಶ್ರೀಮತಿ ಶುಭಾ ವಿಕಾಸ್‌ರವರು ನಿರ್ವಹಿಸಿದ ಕಾರ್ಯಕ್ರಮ ದಲ್ಲಿ ಶ್ರೀ ಬಿ.ಕೆ. ಧನಂಜಯ ರಾವ್ ನಿರ್ದೇಶಕರ ಹಾಗೂ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ನಡೆಸಿಕೊಟ್ಟರು.



ತಾರೀಕು 23.06.2023ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂದಿರದಲ್ಲಿ ಹಿರಿಯರಾದ ಬೆಳ್ಮಣ್ ವಾಸುದೇವರಾಯರ 92ನೇ ಹುಟ್ಟುಹಬ್ಬದ ಪ್ರಯುಕ್ತ ರುದ್ರ ಪಾರಾಯಣದೊಂದಿಗೆ ರುದ್ರಾಭಿಷೇಕ ನಡೆಯಿತು. ಈ ಸಂದರ್ಭದಲ್ಲಿ ಅವರ ಮನೆಯವರು ಹಾಗೂ ಬಂಧುಬಾಂಧವರು ಉಪಸ್ಥಿತರಿದ್ದರು.


## ಸಾಧಕರು

### ದೃಷ್ಟಿ ಎಚ್. ಶ್ಯಾನುಭೋಗ್



ದುಬೈಯಲ್ಲಿರುವ ಶ್ರೀಮತಿ ಜ್ಯೋತಿ ಎಚ್. ಶ್ಯಾನುಭೋಗ್ ಮತ್ತು ಶ್ರೀ ಹರ್ಷವರ್ಧನ್ ಶ್ಯಾನುಭೋಗ್ ದಂಪತಿಯ ಪುತ್ರಿ ದೃಷ್ಟಿ ಎಚ್. ಶ್ಯಾನುಭೋಗ್ ಎಸ್.ಎಸ್.ಎಲ್.ಸಿ.ಯಲ್ಲಿ 97% ಅಂಕಗಳಿಸಿ ಉತ್ತೀರ್ಣರಾಗಿದ್ದಾರೆ. ಇವರು ಇಂಡಿಯನ್ ಹೈಸ್ಕೂಲ್, ದುಬೈ ಇಲ್ಲಿಯ ವಿದ್ಯಾರ್ಥಿನಿಯಾಗಿರುತ್ತಾರೆ.

### ಅಕ್ಷಯ್ ವಿ.



ಕಾರ್ಕಳ ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ವಿಶ್ವೇಶ್ವರ ಇವರ ಪುತ್ರ ಅಕ್ಷಯ್ ವಿ. ಇವರು 2022-23ನೇ ಸಾಲಿನ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ (ಪಿಸಿಎಂಬಿ) ಶೇ.95 ಅಂಕ ಗಳಿಸಿ ಉತ್ತೀರ್ಣರಾಗಿರುತ್ತಾರೆ.

## ಶ್ರೀ ಶಾರದಾಂಬ ಭಜನಾ ಮಂಡಳಿ ಸುಬ್ರಹ್ಮಣ್ಯ ಸಭಾ ಮಂಗಳೂರು ವಾರ್ಷಿಕೋತ್ಸವ



ಶ್ರೀ ಶಾರದಾಂಬ ಭಜನಾ ಮಂಡಳಿ ಸುಬ್ರಹ್ಮಣ್ಯ ಸಭಾ ಮಂಗಳೂರು ಇದರ ನಾಲ್ಕನೇ ವರ್ಷದ ವಾರ್ಷಿಕೋತ್ಸವವನ್ನು ದಿನಾಂಕ 13.6.2023ನೇ ಮಂಗಳವಾರ ಸಭಾದಲ್ಲಿ ಗುರುಗಳಾದ ಶ್ರೀ ಸುಬ್ಬರಾವ್ ಪೊಳಲಿ ಮತ್ತು ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಹರ್ಷಕುಮಾರ್ ಕೇದಿಗೆ ಇವರ ಉಪಸ್ಥಿತಿಯಲ್ಲಿ ಆಚರಿಸಲಾಯಿತು. ಪ್ರಾರ್ಥನೆಯನ್ನು ಕರುಣಾ ರಾವ್ ಮಾಡಿದರು. ಎಲ್ಲರನ್ನೂ ಕುಸುಮ ನವೀನ ಕುಮಾರ್ ಸ್ವಾಗತಿಸಿದರು. ಶಾರದಾಂಬ ಭಜನಾ ಮಂಡಳಿಯು ನಡೆದು ಬಂದ ದಾರಿಯನ್ನು ಶ್ರೀಲತಾ ಗಣೇಶ್ ಓದಿದರು.

ಹಿರಿಯ ಸದಸ್ಯೆ ಸ್ನೇಹಲತಾ ದಿವಾಕರ್ ಮತ್ತು ಡಾ। ದಿವಾಕರ ರಾವ್ ದಂಪತಿಯವರನ್ನು ಹಾಗೂ ಕೃಷ್ಣರಾಜ್ ರಾವ್‌ರವರನ್ನು ಸನ್ಮಾನಿಸಲಾಯಿತು. ಸುಮಂಗಲಾ ಪ್ರಭಾಕರ್ ಮತ್ತು ಪ್ರೇಮಲತಾ ರವರು ಅವರನ್ನು ಪರಿಚಯಿಸಿದರು. ಸನ್ಮಾನಿತರು ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಕನಕವಲ್ಲಿ ಹರ್ಷಕುಮಾರ್ ಕೇದಿಗೆ ಭಜನಾ ಸದಸ್ಯರ ಪರವಾಗಿ ತಮ್ಮ ಅನಿಸಿಕೆಗಳನ್ನು ತಿಳಿಸಿದರು. ಶೃಂಗೇರಿ ಶಂಕರ ತತ್ವ ಅಭಿಯಾನ ಸಂಚಾಲಕರಾದ ಶ್ರೀಧರ್ ಶಾಸ್ತ್ರಿಯವರು ಮಂಡಳಿಗೆ ಶುಭ ಹಾರೈಸಿದರು. ಶ್ರೀ ಸುಬ್ಬರಾವ್ ಪೊಳಲಿ ಯವರು ಭಜನೆಯಲ್ಲಿ ಎಲ್ಲರೂ ಭಾಗಿಯಾಗಬೇಕು ಹಾಗೂ ಇದರಲ್ಲಿ ಹೆಚ್ಚು ಹೆಚ್ಚು ಮಕ್ಕಳನ್ನು ತೊಡಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆಯವರು ಭಜನಾ ಮಂಡಳಿಗೆ ಯಶಸ್ಸನ್ನು ಕೋರಿದರು.

ಈ ಸಂದರ್ಭದಲ್ಲಿ ಭಜನಾ ಮಂಡಳಿಯ ಸಾಧಕರಾದ ವಲ್ಲಿ ಜ್ಞಾನೇಶ್, ಸುಮಂಗಲಾ ಪ್ರಭಾಕರ್, ಶಾರದಾ ರಾವ್, ಪುಷ್ಪಾವತಿ ಶ್ರೀನಿವಾಸ್, ಶ್ರೀನಿವಾಸ ರಾವ್, ಪ್ರೇಮಲತಾ, ವೀಣಾ ಗಿರಿಧರ್, ಸುನೀಲ ಭುಜಂಗ ರಾವ್, ಆಶಾ ರವೀಂದ್ರ ಇವರನ್ನು ಹೂ ನೀಡಿ ಗೌರವಿಸಲಾಯಿತು. ನಂತರ ಶ್ರೀ ಕೃಷ್ಣರಾಜ್ ರಾವ್‌ರವರು ತಮ್ಮ ಶಿಷ್ಯರೊಂದಿಗೆ ಭಜನಾ ಹಾಡುಗಳನ್ನು ಹಾಡಿದರು. ಗುರುಗಳಾದ ಸುಬ್ಬರಾವ್ ಪೊಳಲಿಯವರು ಹಾರ್ಮೋನಿಯಂನಲ್ಲಿ ಮತ್ತು ಕೃಷ್ಣರಾಜ್‌ರವರು ತಬಲದಲ್ಲಿ ಸಹಕರಿಸಿದರು. ಎಲ್ಲಾ ಸದಸ್ಯರು ಭಜನೆ ಹಾಗೂ ಕುಣಿತ ಭಜನೆಯಲ್ಲಿ ಭಾಗವಹಿಸಿ ಸಂಭ್ರಮಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಪುಷ್ಪಾವತಿ ಶ್ರೀನಿವಾಸ್ ಮಾಡಿದರು ಹಾಗೂ ಜ್ಯೋತಿ ರಾವ್‌ರವರು ಧನ್ಯವಾದವಿತ್ತರು.

ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷರಾದ ಡಾ। ಎ.ಪಿ ಕೃಷ್ಣ, ಕೋಶಾಧಿಕಾರಿ ಶ್ರೀಕಾಂತ ರಾವ್, ಕಾರ್ಯದರ್ಶಿ ಕರುಣಾಕರ ಬೆಳ್ಳೆ, ಯುವವೇದಿಕೆ ಅಧ್ಯಕ್ಷ ಅನಿಲ್ ನೆಲ್ಲಿ ಕುಂಜೆ, ಛಾಯಾಗ್ರಾಹಕ ರಘುವೀರ್ ಪೆರ್ಡೂರು ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಸಂತೋಷ್ ಕುಮಾರ್, ಉದಯ ಕುಮಾರ್ ಇವರು ಸಹಕರಿಸಿದರು.

## ಎಂಯುಟಿಬಿಐ ಸಿಇಒ ಆಗಿ ಡಾ. ಸಂತೋಷ ರಾವ್ ಅಧಿಕಾರ ಸ್ವೀಕಾರ



ಮಣಿಪಾಲ ಯುನಿವರ್ಸಲ್ ಟೆಕ್ನಾಲಜಿ ಬಿಸಿನೆಸ್ ಇನ್ಕ್ಯುಬೇಟರ್ (ಎಂಯುಟಿಬಿಐ) ನೂತನ ಸಿಇಒ ಆಗಿ ಡಾ. ಸಂತೋಷ ರಾವ್, ಮಸ್ಕಿಬೈಲ್, ಜೂನ್ 15 ರಂದು ಮಾಹೆ ಕುಲಪತಿ ಲೆಫ್ಟಿನೆಂಟ್ ಜನರಲ್ (ಡಾ) ಎಂ.ಡಿ. ವೆಂಕಟೇಶ್ ಅವರ ಸಮ್ಮುಖದಲ್ಲಿ ಅಧಿಕಾರ ಸ್ವೀಕರಿಸಿದರು. ಎಂ.ಐ.ಟಿ. ಮಣಿಪಾಲದಲ್ಲಿ 20 ವರ್ಷಗಳಿಗೂ ಅಧಿಕ ಕಾಲ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದ ಇವರು ಕಳೆದ ನಾಲ್ಕು ವರ್ಷಗಳ ಕಾಲ ಎಂಯುಟಿಬಿಐ ಎಜಿಎಂ ಆಗಿ ಸೇವೆ ಸಲ್ಲಿಸಿದ್ದಾರೆ. ಎಂ. ಬಾಬುರಾವ್ ಹಾಗೂ ಸುಲೋಚನಾ ದಂಪತಿಗಳ ಸುಪುತ್ರ ಹಾಗೂ ವೈ ವಿಠಲ್ ರಾವ್ ಹಾಗೂ ಪ್ರತಿಮಾ ವಿ. ರಾವ್ ದಂಪತಿಗಳ ಅಳಿಯನಾದ ಇವರು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು ಇದರ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದು, ಪ್ರಸ್ತುತ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಸಂಘದ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.


## ವಿದುಷಿ ರಾಧಾ ಮುರಳೀಧರರವರಿಗೆ ಸನ್ಮಾನ



ಇತ್ತೀಚೆಗೆ ಎಡನೀರಿನಲ್ಲಿ ನಡೆದ ರಂಗಚೆನ್ನಾರಿ ಕಾಸರಗೋಡು ಇದರ ಮಹಿಳಾ ಘಟಕ ನಾರಿ ಚಿನ್ನಾರಿ ಆಯೋಜಿಸಿದ ವೈಶಾಖ ಲಹರಿ ಕಾರ್ಯಕ್ರಮದಲ್ಲಿ ಕಾಸರಗೋಡಿನ ಖ್ಯಾತ ಸಂಗೀತ ವಿದುಷಿ ರಾಧಾ ಮುರಳೀಧರ ರವರನ್ನು ಎಡನೀರು ಮಠಾಧೀಶ ಪರಮ ಪೂಜ್ಯ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮೀಜಿಯವರ ಸಮಕ್ಷಮದಲ್ಲಿ ಗೌರವಾರ್ಪಣೆ ಸಲ್ಲಿಸಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ವಿದುಷಿ ಉಷಾ ಈಶ್ವರ ಭಟ್, ಶ್ರೀಮತಿ ತಾರಾ ಜಗದೀಶ್, ವಿದುಷಿ ಮಾನಸಿ ಸುಧೀರ್ ಮೊದಲಾದವರು ಉಪಸ್ಥಿತರಿದ್ದರು.

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು




SUMIRASA - Full Villa in Udupi for Stay
WHAT THIS PLACE OFFERS
- GARDEN VIEW
- BATHROOM
  Cleaning products, Bidet, Hot water
- BEDROOM AND LAUNDRY
  Free washing machine
- ESSENTIALS
  Towels, bed sheets, soap, Hangers
- BED LINEN
  Cotton linen
- CLOTHES DRYING RACK
- CLOTHES STORAGE: Wardrobe and drawers
- ENTERTAINMENT
  TV and Books and reading material
- HEATING AND COOLING
  AC – split-type ductless system, Ceiling fan
- INTERNET AND OFFICE
  Wifi
- KITCHEN AND DINING
  Kitchen Space where guests can cook
- REFRIGERATOR
- COOKING BASICS
- DISHES AND SILVERWARE

Relax with the whole family at this peaceful place to stay with all major attractions at a short distance. Enjoy the sea waves at Malpe beach within 5KM drive. Seak blessing at the famous Srikrishna Temple and Anantheshwara Temple which is just 2KM. Perfect place for hosting wedding guests with major wedding venues and convention halls near by.



For Booking Contact : +91 98220 28537
You can also visit https://www.airbnb.co.in/rooms

With Best Compliments From :
BUILDING DREAMS, ENHANCING LIVES.



NAKSHATRA — GANDHINAGAR —
SOLITAIRE — HATHILL, —
HABITAT ONE 54 An Urban Lifestyle — DEREBAIL —
ANANTESSH — CAR STREET, —
Land Trades® BUILDERS & DEVELOPERS
BUILDING TRUST, DELIVERING VALUE
MANGALURU'S LEADING REAL ESTATE COMPANY
RESIDENTIAL | COMMERCIAL | PLOTS
For More Details : 8882 777 444 | 0824 2425424, 2423866 | www.landtrades.in
Follow us on :

SHREE SHARADA – Printed and Published by P. Prabhakara Bhandy on behalf of Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar